ಕೆನರಾ
ವೆಲ್‌ಫೇರ್ ಟ್ರಸ್ಟ್
सा विद्या या विमुक्तये

# ಆಡಳಿತಾಧಿಕಾರಿ ವರದಿ 2012–2013





**ಟ್ರಸ್ಟಿನ ಸಂಸ್ಥೆಗಳ, ಧರ್ಮದರ್ಶಿಗಳ, ಮೆನೆಜಿಂಗ್ ಕಮಿಟಿ ಸದಸ್ಯರ,**
**ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಪ್ರಥಮ ಸಹಾಯಕರ ಮತ್ತು ಕಾರ್ಯಾಲಯ**
**ಮುಖ್ಯಸ್ಥರ ಸಂಯುಕ್ತ ವಾರ್ಷಿಕ ಸಭೆ**

**27 ಜುಲೈ 2013**

# ಪರಿವಿಡಿ


| | ವಿಷಯ | ಪುಟ ಸಂ. |
|---|---|---|
| 1. | ಸ್ವಾಗತ ಹಾಗೂ ಉಪೋದ್ಘಾತ | 03–06 |
| 2. | ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ | 06–07 |
| 3. | ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನದ ಕುರಿತು | 07–12 |
| 4. | ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ | 12–14 |
| 5. | ಶೈಕ್ಷಣಿಕ ಪ್ರಗತಿ: 2012–2013ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ | 15–18 |
| 6. | 2012–13ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ / ಅಧ್ಯಾಪಕರ ವಿಶೇಷ ಸಾಧನೆ | 19–23 |
| 7. | ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು | 23–25 |
| 8. | ಟ್ರಸ್ಟು ಪ್ರಕಟಿಸಿದ ಪುಸ್ತಕ | 25 |
| 9. | ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು | 25–28 |
| 10. | 2012–2013ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ ಇತ್ಯಾದಿಗಳ ವಿವರ | 28–30 |
| 11. | ಕ್ರುಗರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ | 31–32 |
| 12. | 'ಜನರಲ್ ವೆಲ್‌ಫೆರ್ ಫಂಡ್' ನಿಂದ ನೀಡಿದ ಸಹಾಯಧನ | 32 |
| 13. | ಶಿಕ್ಷಣಕ್ಕಾಗಿ ಆರ್ಥಿಕ ನೆರವು – 2012–2013ನೇ ಸಾಲಿನಲ್ಲಿ ಪ್ರಾರಂಭಿಸಿದ ಹೊಸ ಯೋಜನೆ | 33–34 |
| 14. | Mobile Health Care Project – ಆರೋಗ್ಯ ತಪಾಸಣೆ ಮತ್ತು ಔಷಧೋಪಚಾರ ಶಿಬಿರ | 34–36 |
| 15. | ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ | 36–38 |
| 16. | Project Change Makers for a Better Tomorrow (ಉತ್ತಮ ನಾಳೆಗಾಗಿ ಪರಿವರ್ತನಾಗಾರರು) | 38–39 |
| 17. | ಟ್ರಸ್ಟಿಗೆ ದೇಣಿಗೆ ನೀಡಿದವರ ವಿವರ | 39 |
| 18. | ಟ್ರಸ್ಟಿಗೆ ಬರುವ ಆದಾಯದ ಕುರಿತು | 40–42 |
| 19. | 2012–2013ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ–ಬೋಧಕೇತರರು | 43–44 |
| 20. | ಸಾವಿನಲ್ಲಿಯೂ ಸೇವೆಯ ಕನಸು – ಗಣಪತಿ ಅಣ್ಣಪ್ಪಯ್ಯ ಪೈ | 44–45 |
| 21. | ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ | 46 |
| 22. | ಪ್ರಗತಿ ಪರಿಶೀಲನಾ ತಂಡದ ಸಲಹೆಗಳು | 47 |
| 23. | ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ | 47–49 |
| 24. | ಸಾಮಾನ್ಯ ಸೂಚನೆಗಳು | 50 |
| 25. | ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ | 51–53 |
| 26. | ಟ್ರಸ್ಟು ನಡೆಸುತ್ತಿರುವ ಸಂಸ್ಥೆಗಳ ಯಾದಿ | 54–55 |

# ಆಡಳಿತಾಧಿಕಾರಿ ವರದಿ – 2012–2013

## 1. ಸ್ವಾಗತ ಹಾಗೂ ಉಪೋದ್ಘಾತ

ಕೆನರಾ ವೆಲ್‌ಫೆರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಉಪನ್ಯಾಸಕರ / ಶಿಕ್ಷಕರ, ಶಿಕ್ಷಕೇತರರ, ಮೆನೆಜಿಂಗ ಕಮಿಟಿಯ ಸದಸ್ಯರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ ವಾರ್ಷಿಕ ಸಭೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರ ಸಲಹೆಯಂತೆ ಇಂದು ದಿನಾಂಕ 27–07–2013 ರಂದು ಗೋಖಲೆ ಸೆಂಟಿನರಿ ಕಾಲೇಜಿನ ಯು.ಜಿ.ಸಿ. ಹಾಲಿನಲ್ಲಿ ಕರೆಯಲಾಗಿದೆ.

ಇಂದಿನ ಈ ಸಭೆಗೆ ಆಗಮಿಸಿದ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರಿಗೆ ಹಾಗೂ ಮೆನೇಜಿಂಗ್ ಕಮಿಟಿ ಸದಸ್ಯರಿಗೆ, ಸಂಸ್ಥೆಗಳ ಎಲ್ಲ ಮುಖ್ಯಸ್ಥರಿಗೆ, ಹಿರಿಯ ಉಪನ್ಯಾಸಕರಿಗೆ, ಹಿರಿಯ ಸಹ ಶಿಕ್ಷಕರಿಗೆ, ಆಫೀಸ ಸಹಾಯಕರಿಗೆ, ಆಮಂತ್ರಿತರಿಗೆ ಟ್ರಸ್ಟಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಈ ಸಭೆ ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಬಹಳ ಮಹತ್ವಪೂರ್ಣವಾದುದು. ಈ ಸಭೆಯಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಪ್ರಗತಿ ಪರಿಶೀಲನೆ, ಸಾಧನೆ, ಲೆಕ್ಕಪತ್ರ ನಿರ್ವಹಣೆ, ಅಭಿವೃದ್ಧಿ ಕಾರ್ಯಗಳು ಮತ್ತು ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಮಾಡಿದ ಸಾಧನೆ ಹಾಗೂ 2012–2013ನೇ ಸಾಲಿನ ಕಾರ್ಯಯೋಜನೆ ಕುರಿತು ಮುಕ್ತವಾಗಿ ಚರ್ಚಿಸಲಾಗುವದು. ಚರ್ಚೆಯ ಕೊನೆಯಲ್ಲಿ ಅಧ್ಯಕ್ಷರು ಕೈಗೊಳ್ಳುವ ಕೆಲವು ಮಹತ್ವದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಎಲ್ಲರ ಮೇಲಿದೆ.



ಕಳೆದ ವರ್ಷ 15–07–2012 ರಂದು ನಡೆದ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಉಲ್ಲೇಖಿಸಿದ ಕೆಲವು ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

*"ಮುಂಬರುವ ದಿನಗಳಲ್ಲಿ ಟ್ರಸ್ಟಿಗೆ Qualitative Changes ಅಗತ್ಯವಾಗಿ ಬೇಕಾಗಿದೆ. ನಮ್ಮ ಮುಂದಿರುವ ಪ್ರತಿಯೊಂದು ಗಳಿಗೆಯೂ ಅತ್ಯಂತ ಅಮೂಲ್ಯವಾಗಿದ್ದು, ಅದರ ಸಂಪೂರ್ಣ ಸದುಪಯೋಗವನ್ನು ಮಾಡಿಕೊಳ್ಳುವ ಅಗತ್ಯವಿದೆ ಎಂಬ ಎಚ್ಚರ ನಮ್ಮಲ್ಲಿರಬೇಕು. ಪುನರಪಿ ತಪ್ಪುಗಳಾಗದಂತೆ ನಾವು ಎಚ್ಚರ ವಹಿಸಬೇಕಾಗುತ್ತದೆ. ನಮ್ಮ ನಡವಳಿಕೆಗಳ ಬಗ್ಗೆ ನಮ್ಮ ಕಾರ್ಯ*


*ಶೈಲಿಯ ಬಗ್ಗೆ ನಾವು ಜಾಗೃತರಾಗಿರಬೇಕು. ನಿಷೇಧಾತ್ಮಕವಾದ ವಿಚಾರಗಳು ನಮ್ಮ ಮುಂದೆ ಸುಳಿಯಬಾರದು. ಇಡೀ ಮಾನವ ಕುಲ ಒಂದು ಎಂಬ ಭಾವನೆ ಪ್ರತಿಯೊಬ್ಬರಲ್ಲಿ ಮೂಡಬೇಕಾಗಿದೆ. ಅದನ್ನು ನಮ್ಮ ಶಿಕ್ಷಕರು ತಾವಷ್ಟೇ ಮೂಡಿಸಿಕೊಳ್ಳುವದಲ್ಲ. ಎಲ್ಲರ ಮನಸ್ಸಿನಲ್ಲಿ ಬಿತ್ತಬೇಕು. ಪ್ರತಿಯೊಬ್ಬರು ಬದಲಾವಣೆ ತರುವ ನಿಟ್ಟಿನಲ್ಲಿ Change Makers ಆಗಬೇಕಾಗಿದೆ. ನಿಜಮಾನವನನ್ನು ರೂಪಿಸುವ ಶಿಕ್ಷಣ ಟ್ರಸ್ಟಿನ ಆದ್ಯತೆಯಾಗಿದೆ. ಇಂದು ಬೇಕಾಗಿರುವ ಮೌಲ್ಯಾಧಾರಿತ ಶಿಕ್ಷಣ (Value Based Education). ನೀವೆಲ್ಲರೂ ಬರೀ ಶಿಕ್ಷಕರಾಗಿರದೆ, ನಮ್ಮ ಶಿಕ್ಷಣದ ದಾರಿ ದಿಕ್ಕುಗಳು ಹೇಗೆ ಸಾಗಬೇಕು, ಅದನ್ನು ಹೇಗೆ ಪ್ರಯೋಗಕ್ಕೆ ತರಬೇಕೆಂಬ ದಿಶೆಯಲ್ಲಿ ನಾವು ಚಿಂತನೆ ನಡೆಸಬೇಕಾದ ಅವಶ್ಯಕತೆ ಇದೆ. ಹೀಗೆ ಅನೇಕ ವಿಚಾರಗಳನ್ನು ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತವರು ತಮ್ಮ ಮುಂದೆ ಇಟ್ಟಿದ್ದಾರೆ. ಈ ಉನ್ನತ ವಿಚಾರಗಳನ್ನು ನಾವು ನೀವೆಲ್ಲರೂ ಕಾರ್ಯರೂಪಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ."*


1953ರಲ್ಲಿ ಪ್ರಾರಂಭಿಸಿದ ಕೆನರಾ ವೆಲ್‌ಫೇರ್ ಟ್ರಸ್ಟಿಗೆ ಈ ವರ್ಷ, 2013ರಲ್ಲಿ 60 ವರ್ಷಗಳು. ಈ ಒಂದು ಶುಭ ಸಂದರ್ಭದಲ್ಲಿ ಟ್ರಸ್ಟಿನ ವಜ್ರಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಬೇಕೆಂಬ ಬಗ್ಗೆ ಕಳೆದ ವರ್ಷ ಶ್ರೀಯುತ ವಿಷ್ಣು ನಾಯ್ಕರವರು ಪ್ರಸ್ತಾಪ ಮಾಡಿದ್ದರು. ಇಂದಿನ ಸಭೆಯಲ್ಲಿ ಟ್ರಸ್ಟಿನ ವಜ್ರಮಹೋತ್ಸವವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವ ಕುರಿತು ಅಧ್ಯಕ್ಷರು ಪ್ರಸ್ತಾಪಿಸಿ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ನೀಡಬೇಕಾಗಿ ವಿನಂತಿಸುತ್ತೇನೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಗುಣಮಟ್ಟದ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಕುರಿತು ಅಧ್ಯಕ್ಷರು ಸಂಸ್ಥೆಯ ಮುಖ್ಯಸ್ಥರೊಡನೆ, ಟ್ರಸ್ಟಿಗಳೊಂದಿಗೆ, ಮೆನೆಜಿಂಗ ಕಮಿಟಿಯ ಸದಸ್ಯರೊಂದಿಗೆ ಇಂದಿನ ಸಭೆಯಲ್ಲಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಟ್ರಸ್ಟು ನಡೆಸುತ್ತಿರುವ ಈ ವಾರ್ಷಿಕ ಸಭೆ ಶೈಕ್ಷಣಿಕ ದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಸಂಪನ್ಮೂಲ ಕ್ರೋಢಿಕರಿಸುವ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿರುತ್ತದೆ.



ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿ, ಹಾಜರಾತಿ, ಪರೀಕ್ಷಾ ಪರಿಣಾಮ, ಸಿಬ್ಬಂದಿಗಳ ಸಮಗ್ರ ಮಾಹಿತಿ, ಲೆಕ್ಕ ಪತ್ರ ನಿರ್ವಹಣೆ, ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು online ಮೂಲಕ ಟ್ರಸ್ಟ್ ಆಫೀಸಿನಲ್ಲಿ ಪಡೆಯಲಾಗುತ್ತದೆ. ಈ ಬಗ್ಗೆ ಎಲ್ಲ ಸಂಸ್ಥೆಗಳಿಗೆ ಪ್ರತ್ಯೇಕ email I.D. ಯನ್ನು ನೀಡಿರುವದರಿಂದ ಎಲ್ಲಾ ಸಂಸ್ಥೆಗಳು ಕೇಂದ್ರ ಕಛೇರಿಯಿಂದ ಕೇಳಿದ ಮಾಹಿತಿಗಳನ್ನು ಕೂಡಲೆ email ಮೂಲಕ ಕಳುಹಿಸಲು ಅನುಕೂಲವಾಗಿದೆ.




ಟ್ರಸ್ಟಿನ Website - **www.kwtankola.com** ಕಾರ್ಯ ನಿರ್ವಹಿಸಲು ಪ್ರಾರಂಭಿಸಿದೆ. ಈ Website ಮೂಲಕ ಟ್ರಸ್ಟಿನ ಮಾಹಿತಿಯನ್ನು ಕಾರ್ಯ–ಚಟುವಟಿಕೆಯನ್ನು ಅಂತರಜಾಲದ ಮೂಲಕ ಜಗತ್ತಿನ ಯಾವದೇ ಸ್ಥಳದಿಂದ ವೀಕ್ಷಿಸಿಬಹುದಾಗಿದೆ. ಈ Websiteನಲ್ಲಿ ಕಾಲಕಾಲಕ್ಕೆ ಟ್ರಸ್ಟಿನಲ್ಲಿ ನಡೆಯುವ ಹೊಸಹೊಸ ಯೋಜನೆಗಳ, ಸಾಧನೆಗಳ ಹಾಗೂ ಇನ್ನಿತರ ಮಾಹಿತಿಯನ್ನು ಸೇರಿಸಿ update ಮಾಡಲಾಗುವದು. ಟ್ರಸ್ಟಿನ ಸಂಸ್ಥೆಗಳಲ್ಲಿ ನಡೆಯುತ್ತಿರುವ ವಿಶೇಷ ಕಾರ್ಯಕ್ರಮ, ಸಾಧನೆ, ಅಭಿವೃದ್ಧಿ ಕಾರ್ಯಗಳಿದ್ದರೆ ಅವುಗಳ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಸಲ್ಲಿಸುತ್ತಿರಬೇಕು. ಎಲ್ಲ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಿ ಕಾರ್ಯ ಪ್ರವೃತ್ತರಾದರೆ ಆಡಳಿತಾತ್ಮಕವಾಗಿ ಹಾಗೂ website update ಮಾಡಲು ತುಂಬಾ ಸಹಕಾರಿಯಾಗುತ್ತದೆ.

Internet ಸೌಲಭ್ಯವಿಲ್ಲದ ಸಂಸ್ಥೆಗಳಾದ ಕಡವಾಡ, ಮುದಗಾ, ಕತಗಾಲ, ಬಾಡ–ಕಾಗಾಲ, ಮುರ್ಡೇಶ್ವರ ಮತ್ತು ಬೇಡ್ಕಣಿ ಈ ಶಾಲೆಯ ಮುಖ್ಯಾಧ್ಯಾಪಕರು ಕೂಡಲೆ ಇಂಟರನೆಟ ಸೌಲಭ್ಯ ಪಡೆಯಬೇಕು. ಇಂಟರ್‌ನೆಟ್ ಸೌಲಭ್ಯ ಕೂಡಲೆ ಪಡೆಯುವಂತೆ ಸಂಸ್ಥೆಯ ಮುಖ್ಯಸ್ಥರಿಗೆ ಶೈಕ್ಷಣಿಕ ಪರಿಶೀಲನಾ ಸಂದರ್ಭದಲ್ಲಿ ಹಾಗೂ ಪತ್ರದ ಮೂಲಕ ತಿಳಿಸಲಾಗಿದೆ.



ಕಳೆದ ಅನೇಕ ವರ್ಷಗಳಿಂದ ಸಂಸ್ಥೆಯ ಮುಖ್ಯಸ್ಥರ ಸಭೆಯನ್ನು ಟ್ರಸ್ಟು ನಡೆಸಿಕೊಂಡು ಬಂದಿದೆ. ಈ ಸಭೆಯಲ್ಲಿ ಕೈಗೊಳ್ಳುವ ಪ್ರತಿಯೊಂದು ನಿರ್ಣಯಗಳ ಪ್ರಯೋಜನ ಎಲ್ಲ ಸಂಸ್ಥೆಗಳಿಗೆ ಲಭಿಸಿ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಮೂಡಿಬರಬೇಕು ಹಾಗೂ ಎಲ್ಲ ಸಂಸ್ಥೆಗಳಲ್ಲಿ ಪ್ರಾಮಾಣಿಕತೆ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕೆನ್ನುವದು ಅಧ್ಯಕ್ಷರ ಪ್ರಾಮಾಣಿಕ ಅನಿಸಿಕೆ ಹಾಗೂ ಕಳಕಳಿಯಾಗಿದೆ. ಇದನ್ನು ಕಾರ್ಯರೂಪಕ್ಕೆ ತರುವದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

2012–2013ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟಿನ ವಿವಿಧ ಶಿಕ್ಷಣ ಸಂಸ್ಥೆಗಳು ನಿರ್ವಹಿಸಿದ ಶೈಕ್ಷಣಿಕ ಕಾರ್ಯ, ಅಭಿವೃದ್ಧಿ, ಸಾಧನೆ, ಪರೀಕ್ಷಾ ಪರಿಣಾಮ, ಲೆಕ್ಕಪತ್ರ ನಿರ್ವಹಣೆ ಮುಂತಾದ ವಿಷಯಗಳ ಅಂಕಿಸಂಖ್ಯೆಗಳನ್ನೊಳಗೊಂಡ ವರದಿಯನ್ನು ತಮ್ಮ ಮುಂದೆ ನಿವೇದಿಸುತ್ತಿದ್ದೇನೆ.

## 2. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ



1. ಟ್ರಸ್ಟಿನ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ ಶಾಲಾ, ಕಾಲೇಜುಗಳಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ ದೊರೆಯುವಂತೆ ಪ್ರಯತ್ನಿಸುವದು, ಶಿಕ್ಷಣದ ಗುಣ ಮಟ್ಟ ಸುಧಾರಿಸುವದರ ಜೊತೆಗೆ ಪಠ್ಯ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಎಲ್ಲ ಮುಲಭೂತ ಸೌಲಭ್ಯ ಒದಗಿಸಿ ಶಿಕ್ಷಣದಲ್ಲಿ ಮಹತ್ವಪೂರ್ಣ ಬದಲಾವಣೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡುವದು.



2. "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸುವದು.
3. ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಹಾಗೂ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುವದು.



4. ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದಿಕ್ಕಿನಲ್ಲಿ ಗಮನ ಹರಿಸುವದು.
5. ಗ್ರಾಮೀಣ ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಟ್ರಸ್ಟಿನ ಸಂಸ್ಥೆಗಳು ಸಾಕ್ಷರತೆ ಪ್ರಮಾಣ ನೂರಕ್ಕೆ ನೂರರಷ್ಟು ಆಗುವಂತೆ ಸ್ವಯಂಪ್ರೇರಣೆಯಿಂದ ಕಾರ್ಯಯೋಜನೆಗಳನ್ನು ಹಾಕಿಕೊಂಡು ಅದನ್ನು ಜಾರಿಗೆ ತರುವಲ್ಲಿ ಸಂಸ್ಥೆಯ ಸಿಬ್ಬಂದಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ತೊಡಗಿಸಿಕೊಂಡು ಪ್ರಯತ್ನಿಸುವದು.
6. ಸರಕಾರದ ಮಳೆಕೊಯ್ಲು ಯೋಜನೆ, ಸಂಪೂರ್ಣ ನಿರ್ಮಲಗ್ರಾಮ ಯೋಜನೆಗಳಿಗೆ ನಮ್ಮ ಸಂಸ್ಥೆಗಳು ತಮ್ಮ ಭಾಗಗಳಲ್ಲಿ ಕೈಜೋಡಿಸಿ ಅವು ಯಶಸ್ವಿಯಾಗುವಂತೆ ನೋಡಿಕೊಳ್ಳುವದು.

7. ಪ್ರತಿಯೊಂದು ಸಂಸ್ಥೆಯವರು (ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳು ಸೇರಿದಂತೆ) ಕಡ್ಡಾಯವಾಗಿ ಪಾಲಕರ ಸಭೆಯನ್ನು ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರವಾಗಿ, ನಡವಳಿಕೆಯ ವಿಚಾರವಾಗಿ, ಹಾಜರಾತಿಯ ವಿಚಾರವಾಗಿ ಮುಕ್ತವಾಗಿ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವದು ಮತ್ತು ಅವರಿಂದ ಬರುವ ಸಲಹೆ ಸೂಚನೆಗಳಿದ್ದರೆ, ಆಕ್ಷೇಪಗಳಿದ್ದರೆ ಅವನ್ನು ದಾಖಲೆಗೊಳಪಡಿಸಿ ಪರಿಹಾರದ ದಾರಿ ಕಂಡುಕೊಳ್ಳುವದು.
8. ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿಗಳ, ಪಾಲಕರ ಹಾಗೂ ಸಮಾಜದ ಗೌರವ ಸಂಪಾದಿಸಿಕೊಂಡು ಕಾರ್ಯ ನಿರ್ವಹಿಸುವದು.

ಟ್ರಸ್ಟಿನ ಧ್ಯೇಯ ಹಾಗೂ ಸಾಮಾಜಿಕ ಚಿಂತನೆಗಳ ಕುರಿತು ದಿನಾಂಕ 15–07–2012 ರಂದು ನಡೆದ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ಅಧ್ಯಕ್ಷರು ಚರ್ಚಿಸಿ ಎಲ್ಲ ಸಂಸ್ಥೆಗಳ ಮುಖ್ಯಸ್ಥರು ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವಂತೆ ಪ್ರಯತ್ನಿಸಬೇಕೆಂದು ಸಲಹೆ ನೀಡಿದ್ದರು. ಈ ಸಲಹೆಯನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರಲಾಗಿದೆ ಎನ್ನುವದರ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ತಮ್ಮ ವರದಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

## 3. ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಅನುಷ್ಠಾನದ ಕುರಿತು






1. ಹೈಸ್ಕೂಲಗಳಲ್ಲಿ ವಿಜ್ಞಾನ ವಿಷಯ ಬೋಧಿಸುವಾಗ ಕೆಲವೊಂದು ಪ್ರಯೋಗಗಳನ್ನು ಮಾಡುವಾಗ ಕೆಮಿಕಲ್ಸ (Chemicals) ಬೇಕಾಗುತ್ತದೆ. ಅವರಿಗೆ ಬೇಕಾಗುವ ಕೆಮಿಕಲ್ಸನ್ನು ಟ್ರಸ್ಟಿನ ವತಿಯಿಂದ ತರಿಸಿ ಬೇಕಾದ ಸಂಸ್ಥೆಗೆ ನೀಡುವಂತೆ ನಿರ್ಣಯಿಸಲಾಗಿತ್ತು. ಈ ಬಗ್ಗೆ ಇಂಡೆಂಟ ಕಳಿಸುವಂತೆ ಸಂಸ್ಥೆಗೆ ತಿಳಿಸಲಾಗಿತ್ತು. 2012–13ನೇ ಸಾಲಿನಲ್ಲಿ ಒಟ್ಟೂ 9 ಸಂಸ್ಥೆಗಳಿಂದ ಬೇಡಿಕೆ ಬಂದಿದ್ದು ಅವರ ಬೇಡಿಕೆಗೆ ಅನುಗುಣವಾಗಿ ಕೆಮಿಕಲ್ಸನ್ನು ಪೂರೈಸಲಾಗಿದೆ. ಇದಕ್ಕೆ ತಗಲಿದ ಒಟ್ಟೂ ವೆಚ್ಚ ರೂ.19,387/–.
2. ಸಭೆಯಲ್ಲಿ ನಿರ್ಣಯಿಸಿದಂತೆ, ಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಸಾದಿಲ್ವಾರ ವೆಚ್ಚಕ್ಕಾಗಿ ಸಂಸ್ಥೆಗಳ ಬೇಡಿಕೆಯಂತೆ ಆಯಾ ಸಂಸ್ಥೆಗೆ ರೂ.7500/– ನೀಡುವಂತೆ ನಿರ್ಣಯಿಸಲಾಗಿತ್ತು. ಅವರ ಬೇಡಿಕೆಯಂತೆ ಸಾದಿಲ್ವಾರ ವೆಚ್ಚವಾಗಿ ರೂ.7500/– ನೀಡಲಾಗಿದೆ. ಇದಕ್ಕೆ ತಗಲಿದ ಹಣ ಒಟ್ಟೂ ರೂ. 1,05,000/–.

3. ಅನುದಾನ ರಹಿತ ಸಿಬ್ಬಂದಿಗಳಿಗೆ ನಿಯಮದಂತೆ ಪಿ.ಎಫ್.ಸೌಲಭ್ಯ ಒದಗಿಸಲಾಗಿದೆ.

## ಅಂಗೀಕರಿಸಿದ ಇತರ ನಿರ್ಣಯಗಳು:

4. ಟ್ರಸ್ಟಿನ ಎಲ್ಲ ಶಾಲಾ–ಕಾಲೇಜುಗಳ ಅಧ್ಯಾಪಕರುಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ 2 ದಿವಸದ 'Orientation Retreat' (ಶಿಕ್ಷಕರ ಪುನಶ್ಚೇತನ ಶಿಬಿರ) ನಡೆಸುವದು.
5. ಟ್ರಸ್ಟಿನ ಶಾಲಾ–ಕಾಲೇಜುಗಳ ಇಂಗ್ಲೀಷ ಶಿಕ್ಷಕರಿಗೆ Spoken English ತರಬೇತಿ ಶಿಬಿರ ನಡೆಸುವದು.
6. ದೈಹಿಕ ಶಿಕ್ಷಕರ ಒಂದು ದಿವಸದ (Refresher Course) ತರಬೇತಿ ಶಿಬಿರ ನಡೆಸುವದು.

## ಅನುಷ್ಠಾನಗೊಳಿಸಿದ ಕುರಿತು ಮಾಹಿತಿ:

## 4. Teachers' Orientation Retreat




ಶಿಕ್ಷಕರ ಪುನಶ್ಚೇತನ ಶಿಬಿರವನ್ನು ಫೆಬ್ರುವರಿ ತಿಂಗಳ 8 ಮತ್ತು 9ನೇ ತಾರೀಖಿನಂದು ಗೋಖಲೆ ಸೆಂಟಿನರಿ ಕಾಲೇಜ್ ಯು.ಜಿ.ಸಿ. ಸಭಾಭವನದಲ್ಲಿ ಜರುಗಿಸಲಾಯಿತು. ಈ ಶಿಬಿರದಲ್ಲಿ ಕಾರವಾರ ಎಜ್ಯುಕೇಶನ ಸೊಸೈಟಿಯ ಹಾಗೂ ಕೆನರಾ ವೆಲ್‌ಫೆರ್ ಟ್ರಸ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟೂ **380 ಅಧ್ಯಾಪಕರು** ಭಾಗವಹಿಸಿದ್ದರು.



ಎರಡು ದಿವಸದ ಈ ಶಿಬಿರದಲ್ಲಿ ಮೊದಲ ದಿನ Keynote Speaker ಆಗಿ ಪ್ರೊ. ಅರುಣ ನಾಯ್ಕ, ಅಜಿಮ್ ಪ್ರೇಮಜಿ ವಿಶ್ವವಿದ್ಯಾಲಯ, ಬೆಂಗಳೂರು ಅವರು ಭಾಗವಹಿಸಿದ್ದರು. ಅವರು "Learning Theories & Classroom Pedagogy" ವಿಷಯದ ಕುರಿತು ವಿದ್ವತ್ತಪೂರ್ಣವಾಗಿ ತಿಳಿಸಿ ಹೇಳಿದರು.



ಶ್ರೀಮತಿ ಅಂಜಲಿ ಮಾನೆ, ಕಾರವಾರದ ಅಮೃತ ವಿದ್ಯಾಲಯದ ಪ್ರಾಚಾರ್ಯರು "Teacher as an Instrument of Change" ವಿಷಯದ ಕುರಿತು ಹಾಗೂ "Continuous and Comprehensive Evaluation in CBSE Pattern" ಕುರಿತು ಸವಿಸ್ತಾರವಾಗಿ ಶಿಕ್ಷಕರಿಗೆ ಮನ ಮುಟ್ಟುವಂತೆ ತಿಳಿಸಿದರು.

ಇದರ ನಂತರ afternoon session ದಲ್ಲಿ ಶಾಲೆಗಳಲ್ಲಿ ಬೋಧನೆ ಮಾಡುವ ಕನ್ನಡ, ಇಂಗ್ಲೀಷ, ಹಿಂದಿ, ಸಂಸ್ಕ್ರತ, ಗಣಿತ, ವಿಜ್ಞಾನ, ಸಮಾಜವಿಜ್ಞಾನ, ದೈಹಿಕ ಶಿಕ್ಷಣ, ಕ್ರಾಪ್ಟ ಮತ್ತು ಡ್ರಾಯಿಂಗ ವಿಷಯಗಳ ಅಧ್ಯಾಪಕರೆಲ್ಲರೂ ಬೇರೆ ಬೇರೆ ಕ್ಲಾಸ ರೂಮುಗಳಲ್ಲಿ ಸೇರಿ ಅವರು ತಾವು ಕಲಿಸುವ ವಿಷಯದ ಮೇಲೆ ಚರ್ಚೆ ನಡೆಸಿ, ಅದರ ಸಾಧಕ–ಬಾಧಕದ ಕುರಿತು ಹಾಗೂ ಬೋಧನೆ ಹೆಚ್ಚು ಪರಿಣಾಮಕಾರಿಯಾಗುವ ದಿಶೆಯಲ್ಲಿ ಅನೇಕ ಸಲಹೆ ಸೂಚನೆ ಮಂಡಿಸಿದರು.

ಚರ್ಚೆ ನಡೆಯುವಾಗ ವಿವಿಧ ವಿಷಯ ತಜ್ಞರಾದ ಶ್ರೀ ವಿಷ್ಣು ನಾಯ್ಕ, ಪ್ರೊ.ಡಿ.ಪಿ.ಕುಚಿನಾಡ, ಪ್ರಿ.ಎಮ್.ಎಸ್.ಲಮಾಣಿ, ಪ್ರಿ.ವಿ.ಆರ್.ವೆರ್ಣೇಕರ, ಶ್ರೀ ಆರ್.ವಿ.ಕೇಣಿ, ಶ್ರೀ ಆದಿತ್ಯ ನಾಯಕ ಮತ್ತು ಶ್ರೀ ಜಿ.ಐ.ಭಟ್ಟ ಮುಂತಾದವರು ಮೊಡರೇಟರ ಆಗಿ ಕಾರ್ಯ ನಿರ್ವಹಿಸಿದರು.



ಈ ಚರ್ಚೆಯಲ್ಲಿ ಮುಖ್ಯವಾಗಿ ಶಿಕ್ಷಣ ಇಲಾಖೆ, ಪಠ್ಯಪುಸ್ತಕ ಮಂಡಳಿ ಗಮನಕ್ಕೆ ತರಬೇಕಾದ ವಿಚಾರ, ಆಡಳಿತ ಮಂಡಳಿ ಗಮನ ಹರಿಸಬೇಕಾದ ವಿಚಾರ, ಸಂಸ್ಥೆ ಮುಖ್ಯಸ್ಥರು ಹಾಗೂ ಅಧ್ಯಾಪಕರು ನಿರ್ವಹಿಸಬೇಕಾದ ಕಾರ್ಯ, ಆಡಳಿತಾತ್ಮಕ ವಿಷಯಗಳು, ಶೈಕ್ಷಣಿಕ ವಿಷಯಗಳು ಮತ್ತು ಪಾಲಕ ವರ್ಗದ ಸಮಸ್ಯೆಗಳು ಚರ್ಚೆಯಾದವು. ಈ ಚರ್ಚೆಯಲ್ಲಿ ಮೂಡಿಬಂದ ಉಪಯುಕ್ತ ಸಲಹೆ ಸೂಚನೆಗಳನ್ನು ಮೊಡರೇಟರ ಕ್ರೋಢಿಕರಿಸಿ ವರದಿ ನೀಡಿದರು.




ಎರಡನೆ ದಿವಸ ಶ್ರೀ ಎಸ್.ಜೆ.ಕೈರನ್ನ, ನಿವೃತ್ತ ಪ್ರಾಚಾರ್ಯರು, ಹೊನ್ನಾವರ, ಇವರು ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, “Teachers & Teaching” ಕುರಿತು ವಿಚಾರ ಬಹಳ ವಿದ್ವತಪೂರ್ಣವಾಗಿ ಮಂಡಿಸಿದರು ಹಾಗೂ ಶಿಕ್ಷಕರೊಡನೆ ಅನೇಕ ವಿಷಯಗಳ ಕುರಿತು Interaction ನಡೆಸಿದರು.




ಬ್ರಹ್ಮಚಾರಿ ಮನೋಜ, ಮಾತಾ ಅಮೃತಾನಂದಮಯಿ ಮಠ, ಕೇರಳ ಇವರು “Life and its values” ಕುರಿತು LCD Projector ಸಹಾಯದಿಂದ ವಿದ್ವತಪೂರ್ಣವಾಗಿ ತಮ್ಮ ವಿಚಾರವನ್ನು ಮಂಡಿಸಿದರು.



ಕೊನೆಯಲ್ಲಿ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಈ ಪುನಶ್ಚೇತನ ಶಿಬಿರ ಆಯೋಜಿಸಿರುವ ಉದ್ದೇಶದ ಬಗ್ಗೆ ತಿಳಿಸಿ ಈ ಕಾರ್ಯಗಾರದ ಸಂಪೂರ್ಣ ಪ್ರಯೋಜನ ಅಧ್ಯಾಪಕರು ಪಡೆದು ಅದರ ಲಾಭ ವಿದ್ಯಾರ್ಥಿಗಳಿಗೆ ಲಭಿಸಬೇಕೆಂದು ತಿಳಿಸಿದರು. ಶಿಕ್ಷಕರಾದವರ ಕರ್ತವ್ಯ, ಅವರ ಮನೋಧರ್ಮ ಹೇಗೆ ಇರಬೇಕು ಎನ್ನುವದರ ಬಗ್ಗೆ ವಿವರಿಸುತ್ತ ನಾವು ಯಾವದೇ ಕಾರ್ಯವನ್ನು ಶೃದ್ಧಾಪೂರ್ವಕವಾಗಿ, ನಂಬಿಕೆಯಿಂದ ಮಾಡಿದರೆ ಯಶಸ್ಸಿನ ಬಗ್ಗೆ ಚಿಂತೆ ಮಾಡುವ ಪ್ರಮೇಯವೇ ಇರುವದಿಲ್ಲ ಎಂದು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಆಗಮಿಸಿದವರಿಗೆ ಊಟ ಮತ್ತು ವಸತಿ ವ್ಯವಸ್ಥೆ ಮಾಡಲಾಗಿತ್ತು. ಈ ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸುವಲ್ಲಿ ಎಲ್ಲರೂ ಸಹಕಾರ ನೀಡಿದ್ದಾರೆ. ಅವರಿಗೆಲ್ಲ ಕೃತಜ್ಞತೆಗಳು.

ಶಿಕ್ಷಕರ ಪುನಶ್ಚೇತನ ಶಿಬಿರದ ಎಲ್ಲ ನಡವಳಿಕೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ. ಅದರ ಪ್ರತಿಯನ್ನು ಸಂಸ್ಥೆಯ ಮುಖ್ಯಸ್ಥರಿಗೆ ಕಳುಹಿಸಲಾಗಿದೆ. ಈ ಶಿಬಿರದ ನಡವಳಿಕೆಗಳನ್ನು ಸುಂದರವಾಗಿ ನಿರೂಪಣೆ ಮಾಡಿ ಪುಸ್ತಕ ರೂಪದಲ್ಲಿ ಹೊರತರಲು ಶ್ರೀ ಪ್ರಶಾಂತ ರಾವ್‌ರವರು ವಿಶೇಶ ಶ್ರಮವಹಿಸಿದ್ದಾರೆ. ಅವರಿಗೆ ತಮ್ಮೆಲ್ಲರ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

## 5. English Language Advancement Programme



ಟ್ರಸ್ಟಿನ ಶಾಲಾ ಕಾಲೇಜುಗಳಲ್ಲಿ ಇಂಗ್ಲೀಷ ವಿಷಯ ಬೋಧನೆ ಮಾಡುವ ಅಧ್ಯಾಪಕರಿಗೆ English Language Advancement Programmeದ ಅಂಗವಾಗಿ Spoken English ತರಬೇತಿ ಶಿಬಿರವನ್ನು ದಿನಾಂಕ 19-11-2012 ಹಾಗೂ 20-11-2012ರಂದು ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ದಾಂಡೇಲಿಯಲ್ಲಿ ಆಯೋಜಿಸಲಾಗಿತ್ತು.

ಈ ಶಿಬಿರದಲ್ಲಿ ಡಾ.ಆರ್.ಜಿ.ಹೆಗಡೆ, ಪ್ರೊಫೆಸರ ಆಫ್ ಇಂಗ್ಲೀಷ, ಬಂಗೂರನಗರ ಕಾಲೇಜ್, ದಾಂಡೇಲಿ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಶಿಬಿರಾರ್ಥಿಗಳಿಗೆ English Language Communication Skillದ ಕುರಿತು ತಿಳುವಳಿಕೆ ನೀಡಿದರು. ಹಾಗೂ ಇಂಗ್ಲೀಷ ವಿಷಯ ಬೋಧನೆಯ ಕ್ರಮದ ಕುರಿತು ಉಪಯುಕ್ತ ಮಾಹಿತಿಯನ್ನು ಶಿಬಿರಾರ್ಥಿಗಳಿಗೆ ನೀಡಿದರು.

ನಂತರ ಪ್ರೊ. ಶ್ರೀಮತಿ ಲತಾ ಸ್ಥಳೇಕರ ಅವರು ಇಂಗ್ಲೀಷ ವ್ಯಾಕರಣ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಬೋಧನೆ ಮಾಡುವ ಕ್ರಮದ ಬಗ್ಗೆ ಉದಾಹರಣೆ ಸಹಿತ ವಿವರಿಸಿದರು.

ಮಾರನೆ ದಿವಸ ಪ್ರೊ.ಎನ್.ಕೆ.ಭಟ್ಟ, ಶ್ರೀಮತಿ ಹಾಲಿಮಾ ಬೂಖಾರಿ ಅವರು ಮಕ್ಕಳಿಗೆ ಇಂಗ್ಲೀಷ ವಿಷಯವನ್ನು ಬೋಧಿಸುವ ವಿವಿಧ ರೀತಿಗಳನ್ನು ತಿಳಿಸಿಕೊಟ್ಟರು. ತಪ್ಪಿಲ್ಲದೆ ಇಂಗ್ಲೀಷ ಮಾತನ್ನಾಡುವ ವಿಧಾನವನ್ನು ಹೇಳಿದರು. ವ್ಯಾಕರಣ ಕಲಿಸುವಿಕೆಯ ಬಗ್ಗೆ ವಿಶೇಷ ತಿಳುವಳಿಕೆ ನೀಡಿದರು.

ಕೊನೆಯಲ್ಲಿ ಇಂಗ್ಲೀಷ ಬೋಧನೆ ಮಾಡುವಾಗ ಶಿಕ್ಷಕರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮುಕ್ತ ಚರ್ಚೆಯಾಯಿತು. ವಿಷಯತಜ್ಞರು ಅವರ ಎಲ್ಲ ಸಮಸ್ಯೆಗಳಿಗೆ ಪರಿಹಾರ ನೀಡಿದರು. ಈ ಶಿಬಿರದಲ್ಲಿ ಟ್ರಸ್ಟಿನ **ಒಟ್ಟೂ 62** ಇಂಗ್ಲೀಷ ವಿಷಯ ಬೋಧನೆ ಮಾಡುವ ಅಧ್ಯಾಪಕರು ಭಾಗವಹಿಸಿದ್ದರು.

ಎರಡು ದಿವಸದ ಈ ಶಿಬಿರವನ್ನು ಪ್ರಾಚಾರ್ಯರಾದ ಶ್ರೀ ಎಮ್.ಎಸ್.ಲಮಾಣಿಯವರು ಅಚ್ಚುಕಟ್ಟಾಗಿ ಆಯೋಜಿಸಿದರು. ಶ್ರೀ ಲಮಾಣಿಯವರು ಹಾಗೂ ಅವರ ಸಿಬ್ಬಂದಿಗಳ ನೆರವಿನಿಂದ ಬಂದ ಎಲ್ಲ ಅಧ್ಯಾಪಕರಿಗೆ ಹಾಗೂ ಸಂಘಟಕರಿಗೆ ಊಟದ ವ್ಯವಸ್ಥೆ, ಟಿಫಿನ ವ್ಯವಸ್ಥೆ ಮತ್ತು ಉಳಿದುಕೊಳ್ಳುವ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಿದ್ದಾರೆ. ಅವರಿಗೆ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

## 6. One-Day Workshop for Phy. Ed. Teachers



ದೈಹಿಕ ಶಿಕ್ಷಕರ ಒಂದು ದಿವಸದ ಪುನಶ್ಚೇತನ ತರಬೇತಿ ಶಿಬಿರವನ್ನು ದಿನಾಂಕ 09-10-2012 ರಂದು ಪಿ.ಎಮ್.ಹೈಸ್ಕೂಲಿನಲ್ಲಿ ನಡೆಸಲಾಗಿದೆ. ಟ್ರಸ್ಟಿನ ಎಲ್ಲಾ ಶಾಲಾ-ಕಾಲೇಜುಗಳ **23** ಜನ ದೈಹಿಕ ಶಿಕ್ಷಕರು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಸಂಪನ್ಮೂಲ ವ್ಯಕ್ತಿಗಳಾಗಿ –

1. ಶ್ರೀ ಕೆ.ಎನ್.ತೋಳೆ, ದೈಹಿಕ ಶಿಕ್ಷಕ-ನಿರ್ದೇಶಕರು, ದಿವೇಕರ ವಾಣಿಜ್ಯ ಮಹಾವಿದ್ಯಾಲಯ, ಕಾರವಾರ
2. ಶ್ರೀ ಎಮ್.ಎಮ್.ಕರ್ಕಿಕರ್, ನಿವೃತ್ತ ದೈಹಿಕ ಶಿಕ್ಷಕರು ಹಾಗೂ ಕ್ರೀಡಾ ಪಟುಗಳು, ಅಂಕೋಲಾ
3. ಶ್ರೀ ಗಣಪತಿ ಗಾಂವಕರ, ನಿವೃತ್ತ ಶಾರೀರಿಕ ಶಿಕ್ಷಕರು ಭಾಗಸಿದ್ದರು.

ಈ ಶಿಬಿರದಲ್ಲಿ ದೈಹಿಕ ಶಿಕ್ಷಕರಿಗೆ ಸಂಪನ್ಮೂಲ ವ್ಯಕ್ತಿಗಳು ಸಾಮೂಹಿಕ ಕವಾಯತು, ಗುಂಪು ಆಟಗಳ ನಿಯಮ, ಮೇಲಾಟದ ನಿಯಮ, ಧ್ವಜಾರೋಹಣ, ಧ್ವಜ ಕಟ್ಟುವದು, ಧ್ವಜ ವಂದನೆ, ಯೋಗ ಮುಂತಾದ ಹಲವಾರು ಕ್ರೀಡೆಯ ಬಗ್ಗೆ ಪ್ರಾಯೋಗಿಕ ತರಬೇತಿ ನೀಡಿದರು. ಪರೀಕ್ಷೆಗಳಲ್ಲಿ ಅಂಕ ನೀಡಿಕೆ, ಕ್ರೀಡಾಕೂಟಗಳಿಗೆ ಸಂಪನ್ಮೂಲ ಕ್ರೋಢೀಕರಣ, ಶಾರೀರಿಕ ಶಿಕ್ಷಕರು ನಿರ್ವಹಿಸಬೇಕಾದ ದಾಖಲೆ ಮುಂತಾದ ವಿಷಯಗಳ ಬಗ್ಗೆಯೂ ಸಂಪನ್ಮೂಲ ವ್ಯಕ್ತಿಗಳು ಮಾರ್ಗದರ್ಶನ ಮಾಡಿದರು.

ಈ ಕಾರ್ಯಕ್ರಮದ ಸಂಘಟನೆಯ ಪೂರ್ತಿ ಜವಾಬ್ದಾರಿಯನ್ನು ಪಿ.ಎಂ.ಹೈಸ್ಕೂಲಿನ ಪ್ರಾಚಾರ್ಯರಾದ ಶ್ರೀ ರವೀಂದ್ರ ಕೇಣಿಯವರು ನಿರ್ವಹಿಸಿದರು. ಅವರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ನಿರ್ಣಯಿಸಿದ ಮೂರು ಶೈಕ್ಷಣಿಕ ಕಾರ್ಯಗಾರಗಳು ಯಶಸ್ವಿಯಾಗಿ ನಡೆದುದಲ್ಲದೆ, ಅದರ ಸಂಪೂರ್ಣ ಪ್ರಯೋಜನ ಶಿಕ್ಷಕ ವೃಂದದವರಿಗೆ ದೊರೆತಿದೆ. ಈ ಮೂರು ಕಾರ್ಯಗಾರದ ಬಗ್ಗೆ ಶಿಕ್ಷಕ ವೃಂದದವರೆಲ್ಲರೂ ತಮ್ಮ ಅಪಾರ ಮೆಚ್ಚುಗೆಯನ್ನು ವ್ಯಕ್ತ ಪಡಿಸಿರುತ್ತಾರೆ. ಇಂಥ ಶಿಬಿರಗಳು ಪ್ರತಿ ವರ್ಷ ನಡೆಯುವಂತಾಗಲಿ ಎಂದು ಹಾರೈಸಿದ್ದಾರೆ.

## 4. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ

2012–2013ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.


### ACADEMIC YEAR 2012-2013


| Sl. | NAME OF THE INSTITUTION | Student Strength | Total No. of Employees | | | |
|---|---|---|---|---|---|---|
| | | | Aided Employees | | Appointed by Mgt. | |
| | | | Teaching | Non-Teaching | Teaching | Non-Teaching |
| | **DEGREE COLLEGES** | | | | | |
| 1. | Gokhale Centenary College, Ankola | 355 | 24 | 6 | 9 | 12 |
| 2. | Divekar College Of Commerce, Karwar | 332 | 10 | 6 | 9 | 6 |
| 3. | KWT's College of Education, Dandeli | 45 | - | - | 7 | 3 |
| 4. | B.C.A. College, Karwar | 57 | - | - | 6 | 2 |
| | **Total** | **789** | **34** | **12** | **31** | **23** |
| | **JUNIOR COLLEGES** | | | | | |
| 5. | Gokhale Centenary P.U. College, Ankola | 204 | 1 | 1 | 9 | 8 |
| 6. | Divekar P.U. Commerce College, Karwar | 176 | 1 | - | 8 | 1 |
| 7. | J.V.Comp. Jr. College, Dandeli | 231 | 7 | 6 | 1 | 1 |
| 8. | J.V.Comp. Jr. College, Kadtoka | 150 | 5 | 2 | 2 | - |
| 9. | J.V.Comp. Jr. College, Shirali, Bhatkal | 492 | 6 | 1 | 7 | 7 |
| 10. | P.M. Comp. Jr. College, Ankola | 100 | 6 | 1 | - | 2 |
| 11. | Divekar P.U. Science College, Karwar | 59 | - | - | 4 | 4 |
| | **Total** | **1412** | **26** | **11** | **31** | **23** |

| | | | | | | |
|---|---|---|---|---|---|---|
| | **HIGH SCHOOLS** | | | | | |
| 12. | P.M. High School, Ankola | 515 | 15 | 2 | 4 | 3 |
| 13. | Janata Vidyalaya, Baad-Kagal, Kumta | 245 | 9 | - | - | 4 |
| 14. | Janata Vidyalaya, Shirali, Bhatkal | 268 | 7 | 2 | 2 | - |
| 15. | Janata Vidyalaya, Dandeli | 1001 | 20 | 2 | 7 | 6 |
| 16. | Janata Vidyalaya, Kadwad, Karwar | 106 | 6 | 1 | 2 | 1 |
| 17. | Janata Vidyalaya, Kasarkod, Honnavar | 243 | 7 | - | 2 | 1 |
| 18. | Janata Vidyalaya, Murdeshwar, Bhatkal | 444 | 6 | - | 8 | 1 |
| 19. | Janata Vidyalaya, Mirjan-Kodkani, Kumta | 385 | 10 | - | - | 2 |
| 20. | Janata Vidyalaya, Kadtoka | 244 | 9 | - | - | 4 |
| 21. | Janata Vidyalaya, Mudga, Karwar | 121 | 6 | 1 | 1 | 1 |
| 22. | Janata Vidyalaya, Dhareshwar, Kumta | 150 | 8 | 2 | - | - |
| 23. | Janata Vidyalaya, Bedkani, Siddapur | 162 | 6 | - | 2 | 1 |
| 24. | S.K.P. High School, Katgal, Kumta | 258 | 6 | 1 | 3 | 2 |
| 25. | Janata Vidyalaya, Anilgod, Honnavar | 100 | 7 | 1 | - | 1 |
| 26. | Janata Vidyalaya, Kulve-Baroor, Sirsi | 124 | 6 | 2 | 2 | 1 |
| 27. | P.M. Eng.Medium High School, Ankola | 111 | - | - | 3 | 2 |
| | **Total** | **4477** | **128** | **14** | **36** | **30** |
| | **PRIMARY AND PRE-PRIMARY SCHOOLS** | | | | | |
| 28. | English Medium Primary School, Dandeli | 1461 | 7 | - | 10 | 2 |
| 29. | Kannada Medium Primary School, Dandeli | 424 | - | - | 8 | 2 |
| 30. | Dr. Dinkara Desai Primary School, Ankola | 486 | - | - | 10 | 2 |
| 31. | J.V. Dinkar Primary School, Dhareshwar | 200 | - | - | 10 | 3 |
| 32. | Balamandir, Shirali | 97 | - | - | 5 | 2 |
| 33. | English Medium Nursery School, Dandeli | 305 | - | - | 4 | 3 |
| 34. | Kannada Medium Nursery School, Dandeli | 122 | - | - | 2 | 1 |
| 35. | Thakkar Bapa Nursery School, Ankola | 184 | - | - | 3 | 1 |
| 36. | Dinkar Pre-Primary School, Dhareshwar | 78 | - | - | 7 | 1 |
| 37. | Anandashrama Balavikasa Kendra, Mundgod | 15 | - | - | 2 | - |
| | **Total** | **3372** | **7** | **0** | **61** | **17** |
| | **OTHER SOCIAL SERVICE INSTITUTIONS** | | | | | |
| 38. | Thakkar Bapa Tailoring School, Ankola | 15 | - | - | 1 | - |
| 39. | Tailoring School, Mundgod | 12 | - | - | 1 | - |
| 40. | Dinkar Kalaniketan Music School, Ankola | 21 | - | - | 1 | - |
| 41. | Dinkar Kalaniketan Music School, Karwar | 25 | - | - | | - |
| 42. | Satyasai Balavikas Kendra, Kodibag, Karwar | - | - | - | - | - |
| 43. | Computer Traing Centre, Karwar | 216 | - | - | 3 | 1 |
| 44. | Computer Training Centre, Dandeli | 666 | - | - | 2 | 1 |
| | **Total** | **955** | **-** | **-** | **8** | **2** |

## ABSTRACT

| Sl | Institutions | Student Strength | EMPLOYEES | | | | |
|---|---|---|---|---|---|---|---|
| | | | Aided Employees | | Appointed by Mgt. | | Total Employees |
| | | | Teachers | N.T.Staff | Teachers | N.T.Staff | |
| 1 | **Degree Colleges** | **789** | **34** | **12** | **31** | **23** | **100** |
| 2 | **Junior Colleges** | **1412** | **26** | **11** | **31** | **23** | **91** |
| 3 | **High Schools** | **4477** | **128** | **14** | **36** | **30** | **208** |
| 4 | **Primary & Pre-Primary Schools** | **3372** | **7** | **-** | **61** | **17** | **85** |
| 5 | **Other Institutions** | **955** | **-** | **-** | **8** | **2** | **10** |
| | **GRAND TOTAL** | **11005** | **195** | **37** | **167** | **95** | **494** |




| | Degree Colleges | Junior Colleges | High Schools | Primary And Pre-Primary Schools | Other Institutions |
|---|---|---|---|---|---|
| Teachers (Aided) | 34 | 26 | 128 | 7 | 0 |
| Non.T. Staff (Aided) | 12 | 11 | 14 | 0 | 0 |
| Teachers (Mgt.) | 31 | 31 | 36 | 61 | 8 |
| Non.T. Staff (Mgt.) | 23 | 23 | 30 | 17 | 2 |


ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ 11005 ವಿದ್ಯಾರ್ಥಿಗಳು 2012–2013ನೇ ಸಾಲಿನಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿರುತ್ತಾರೆ. ವಿವಿಧ ಸಂಸ್ಥೆಗಳಲ್ಲಿ ಒಟ್ಟೂ 195 ಅನುಮೋದಿತ ಅಧ್ಯಾಪಕರು, 37 ಅಧ್ಯಾಪಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಹೊರತಾಗಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಪೂರ್ಣಕಾಲಿಕ ಹಾಗೂ ಅರೆಕಾಲಿಕ 167 ಅಧ್ಯಾಪಕರು ಹಾಗೂ 95 ಶಿಕ್ಷಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟೂ **494** ಸಿಬ್ಬಂದಿಗಳು ಹಾಗೂ ಟ್ರಸ್ಟ ಕಾರ್ಯಾಲಯದಲ್ಲಿ **4** ಸಿಬ್ಬಂದಿಗಳು ಸೇರಿ ಒಟ್ಟೂ **498** ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

## 5. ಶೈಕ್ಷಣಿಕ ಪ್ರಗತಿ: 2012–2013ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವಿ ಪರೀಕ್ಷೆಯಲ್ಲಿ ಮಾಡಿದ ಸಾಧನೆ

2012–2013ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಪರೀಕ್ಷೆ ಪರಿಣಾಮದ ವಿವರ ಈ ಕೆಳಗಿನಂತೆ ಇದೆ.

### SSLC EXAMINATION HELD IN MARCH / APRIL 2013

| Name of the School | Students Appeared | Students Passed | RESULT % | *Previous Year's Result* |
|---|---|---|---|---|
| **Janata Vidyalaya, Kulve-Baroor** | 30 | 28 | **93.33** | *96.55* |
| **Janata Vidyalaya Anilgod** | 38 | 35 | **92.11** | *96.67* |
| **Janata Vidyalaya Baad-Kagal** | 81 | 73 | **90.12** | *94.68* |
| **Janata Vidyalaya, Dhareshwar** | 40 | 36 | **90.00** | *90.91* |
| **Janata Vidyalaya, Kadtoka** | 60 | 54 | **90.00** | *88.14* |
| **P.M.High School, Ankola** | 187 | 164 | **87.70** | *97.73* |
| **Janata Vidyalaya, Kadwad** | 38 | 33 | **86.84** | *92.11* |
| **Janata Vidyalaya. Kasarkod** | 76 | 66 | **86.84** | *86.76* |
| **S.K.P.High School, Katgal** | 81 | 70 | **86.42** | *97.37* |
| **Janata Vidyalaya, Murdeshwar** | 166 | 143 | **86.14** | *83.10* |
| **Janata Vidyalaya, Mudga** | 53 | 43 | **81.13** | *97.22* |
| **Janata Vidyalaya, Mirjan** | 143 | 115 | **80.42** | *90.83* |
| **Janata Vidyalaya, Shirali** | 83 | 66 | **79.52** | *95.69* |
| **Janata Vidyalaya, Bedkani** | 54 | 39 | **72.22** | *96.55* |
| **Janata Vidyalaya, Dandeli** | 332 | 233 | **70.18** | *95.62* |



ಮಾರ್ಚ 2013ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟು ನಡೆಸುತ್ತಿರುವ ಜನತಾ ವಿದ್ಯಾಲಯ ಕುಳವೆ–ಬರೂರ(ಶಿರ್ಸಿ) ಶಾಲೆ ಶೇಕಡಾ 93.33 ರಷ್ಟು ಫಲಿತಾಂಶ ನೀಡಿ ಪ್ರಥಮ ಸ್ಥಾನದಲ್ಲಿದೆ. ಶೇಕಡಾ 92.11 ರಷ್ಟು ಫಲಿತಾಂಶ ನೀಡಿದ ಜನತಾ ವಿದ್ಯಾಲಯ, ಅನಿಲಗೋಡ ಶಾಲೆ ದ್ವಿತೀಯ ಸ್ಥಾನದಲ್ಲಿದ್ದರೆ, ಶೇಕಡಾ 90.12 ರಷ್ಟು ಫಲಿತಾಂಶ ನೀಡಿ ಜನತಾ ವಿದ್ಯಾಲಯ, ಬಾಡ–ಕಾಗಾಲ ಶಾಲೆ ತೃತೀಯ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಧಾರೇಶ್ವರ ಹಾಗೂ ಜನತಾ ವಿದ್ಯಾಲಯ ಕಡತೋಕಾ ಶಾಲೆ ಶೇಕಡಾ 90.00 ರಷ್ಟು ಫಲಿತಾಂಶ ನೀಡಿ 4ನೇ ಸ್ಥಾನದಲ್ಲಿದ್ದರೆ, ಪಿ.ಎಮ್.ಹೈಸ್ಕೂಲ, ಅಂಕೋಲಾ ಶೇಕಡಾ 87.70ರಷ್ಟು ಫಲಿತಾಂಶ ನೀಡಿ 5ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಕಡವಾಡ ಶಾಲೆ ಮತ್ತು ಜನತಾ ವಿದ್ಯಾಲಯ ಕಾಸರಕೋಡ ಶಾಲೆ 86.84 ರಷ್ಟು ಫಲಿತಾಂಶ ನೀಡಿ 6ನೇ ಸ್ಥಾನದಲ್ಲಿದೆ. ಎಸ್.ಕೆ.ಪಿ.ಹೈಸ್ಕೂಲ, ಕತಗಾಲ ಶಾಲೆ ಶೇಕಡಾ 86.42 ರಷ್ಟು ಫಲಿತಾಂಶ ನೀಡಿ 7ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಮುರ್ಡೇಶ್ವರ ಶಾಲೆ ಶೇಕಡಾ 86.14 ರಷ್ಟು ಫಲಿತಾಂಶ ನೀಡಿ 8ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಮುದಗಾ 81.13 ರಷ್ಟು ಮಿರ್ಜಾನ 80.42 ರಷ್ಟು, ಜನತಾ ವಿದ್ಯಾಲಯ ಶಿರಾಲಿ 79.52 ರಷ್ಟು, ಜನತಾ ವಿದ್ಯಾಲಯ ಬೇಡ್ಕಣಿ ಶೇಕಡಾ 72.22 ರಷ್ಟು ಫಲಿತಾಂಶ ನೀಡಿ ನಂತರದ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ದಾಂಡೇಲಿ ಶಾಲೆ ಮಾತ್ರ ಶೇಕಡಾ 70.18 ರಷ್ಟು ಫಲಿತಾಂಶ ನೀಡಿ ಕೊನೆಯ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಬೇಡ್ಕಣಿ ಶಾಲೆ ಹಾಗೂ ಜನತಾ ವಿದ್ಯಾಲಯ ದಾಂಡೇಲಿ ಶಾಲೆಯ ಫಲಿತಾಂಶ ರಾಜ್ಯ ಮಟ್ಟದ ಸರಾಸರಿಗಿಂತ ಕಡಿಮೆಯಾಗಿರುವದು ನಿರಾಶದಾಯಕವಾಗಿದೆ. ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕ ವರ್ಗದವರು ಈ ಕುರಿತು ಚಿಂತನೆ ಮಾಡಿ ಇದು ಪುನರಾವರ್ತನೆ ಆಗದಂತೆ ವಿಶೇಷ ಕಾಳಜಿ ವಹಿಸಿ ಕಾರ್ಯ ನಿರ್ವಹಿಸಬೇಕಾಗಿದೆ. ಬರುವ ವರ್ಷ ಶಾಲೆಯ ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕರು ಹೆಚ್ಚು ಶ್ರಮವಹಿಸಿ ಫಲಿತಾಂಶ ಉತ್ತಮಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಈ ಮೂಲಕ ತಿಳಿಸಲಾಗಿದೆ.


2013ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಟ್ರಸ್ಟು ನಡೆಸುತ್ತಿರುವ 5 ಸಂಸ್ಥೆಗಳು ಶೇಕಡಾ 90ಕ್ಕಿಂತ ಹೆಚ್ಚು ಫಲಿತಾಂಶ ನೀಡಿರುವದು ಹೆಮ್ಮೆಯ ವಿಷಯ ಅವರೆಲ್ಲರೂ ಅಭಿನಂದನಾರ್ಹರು. ಬರುವ ಶೈಕ್ಷಣಿಕ ವರ್ಷದಲ್ಲಿ ಎಲ್ಲ ಶಾಲೆಗಳು ಇನ್ನೂ ಉತ್ತಮ ಫಲಿತಾಂಶ ನೀಡಿ ಟ್ರಸ್ಟಿಗೆ, ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಕೀರ್ತಿ ತರುವಂತೆ ಎಲ್ಲ ಶಿಕ್ಷಕ ವೃಂದದವರು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅತಿ ಹೆಚ್ಚು ಫಲಿತಾಂಶ ನೀಡಿದ ಜನತಾ ವಿದ್ಯಾಲಯ ಕುಳವೆ–ಬರೂರ (ಶಿರ್ಸಿ) ಹಾಗೂ ಉತ್ತಮ ಫಲಿತಾಂಶ ನೀಡಿ ಉಳಿದ ಸ್ಥಾನ ಅಲಂಕರಿಸಿದ ಎಲ್ಲ ಶಾಲೆಯ ಮುಖ್ಯಾಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

## PU II YEAR EXAMINATION HELD IN APRIL 2013

| Name of the College | Stream | Students Appeared | Students Passed | RESULT % | *Previous Year's Result* |
|---|---|---|---|---|---|
| **G.C. P.U. College, Ankola** | Commerce | 34 | 34 | **100.00** | *91.18* |
| **J.V. Comp. Jr. College, Shirali** | Commerce | 69 | 65 | **94.20** | *98.33* |
| **J.V. Comp. Jr. College, Shirali** | Arts | 154 | 144 | **93.51** | *96.15* |
| **J.V. Comp. Jr. College, Kadtoka** | Arts | 81 | 70 | **86.42** | *93.33* |
| **G.C.P.U.College, Ankola** | Science | 68 | 56 | **82.35** | *65.91* |
| **J.V. Comp. Jr. College, Dandeli** | Arts | 29 | 23 | **79.31** | *73.53* |
| **J.V.Comp.Jr.College, Dandeli** | Commerce | 59 | 46 | **77.97** | *85.37* |
| **P.M. Comp. Jr. College, Ankola** | Arts | 40 | 31 | **77.50** | *85.71* |
| **Divekar P.U. College, Karwar** | Commerce | 83 | 60 | **72.29** | *86.60* |
| **G.C. P.U. College, Ankola** | Arts | 11 | 7 | **63.64** | *61.54* |
| **Divekar P.U. College, Karwar** | Science | 31 | 16 | **51.61** | *59.57* |





ದ್ವಿತೀಯ ಪಿ.ಯು. ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ ಶೇಕಡಾ 94.20ರಷ್ಟು ಹಾಗೂ ಕಲಾ ವಿಭಾಗದಲ್ಲಿ 93.51 ರಷ್ಟು ಫಲಿತಾಂಶ ನೀಡಿದ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಶಿರಾಲಿ ಮೊದಲ ಸ್ಥಾನದಲ್ಲಿದೆ. ಕಲಾ ವಿಭಾಗದಲ್ಲಿ ಶೇಕಡಾ 86.42 ರಷ್ಟು ಫಲಿತಾಂಶ ನೀಡಿ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಡತೋಕಾ ದ್ವಿತೀಯ ಸ್ಥಾನದಲ್ಲಿದೆ. ವಾಣಿಜ್ಯ ವಿಭಾಗದಲ್ಲಿ 100ಕ್ಕೆ 100 ಫಲಿತಾಂಶ, ವಿಜ್ಞಾನ ವಿಭಾಗದಲ್ಲಿ ಶೇಕಡಾ 82.35 ಹಾಗೂ ಕಲಾ ವಿಭಾಗದಲ್ಲಿ 63.64 ರಷ್ಟು ಫಲಿತಾಂಶ ನೀಡಿದ ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ್, ಅಂಕೋಲಾ ತೃತೀಯ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ದಾಂಡೇಲಿ, ಪಿ.ಎಂ. ಪದವಿ ಪೂರ್ವ ಕಾಲೇಜು, ಅಂಕೋಲಾ, ದಿವೇಕರ ವಾಣಿಜ್ಯ ಪದವಿ ಪೂರ್ವ ಕಾಲೇಜು, ಕಾರವಾರ ನಂತರದ ಸ್ಥಾನದಲ್ಲಿವೆ. ದಿವೇಕರ ಪದವಿ ಪೂರ್ವ ವಿಜ್ಞಾನ ಕಾಲೇಜು ಮಾತ್ರ ಶೇಕಡಾ 51.61ರಷ್ಟು ಫಲಿತಾಂಶ ನೀಡಿ ಕೊನೆಯ ಸ್ಥಾನದಲ್ಲಿದೆ ಹಾಗೂ ರಾಜ್ಯದ ಶೇಕಡಾ ಫಲಿತಾಂಶಕ್ಕಿಂತ ಕಡಿಮೆಯಾಗಿದೆ. ಈ ಕಾಲೇಜಿನವರು ಉತ್ತಮ ಫಲಿತಾಂಶ ನೀಡಲು ಬರುವ ವರ್ಷ ಹೆಚ್ಚು ಪ್ರಯತ್ನ ಮಾಡಬೇಕು.

ಉತ್ತಮ ಸಾಧನೆ ಮಾಡಿದ ಎಲ್ಲ ಕಾಲೇಜಿನ ಪ್ರಾಚಾರ್ಯರಿಗೂ, ಅಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಅಭಿನಂದನೆ ಸಲ್ಲಿಸುತ್ತೇನೆ.

ಪದವಿ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

## DEGREE EXAMINATION HELD IN MAY / JUNE 2013

| Name of the College | Stream | Students appeared | Students passed | RESULT % | *Previous Year's Result* |
|---|---|---|---|---|---|
| **BCA College, Karwar** | COMP APPL. | **12** | **12** | **100** | *100.00* |
| **B.Ed. College, Dandeli** | EDUCATION | **45** | **44** | **97.78** | *100.00* |
| **Divekar College, Karwar** | COMMERCE | **104** | **100** | **96.15** | *94.38* |
| **G.C.College, Ankola** | SCIENCE | **91** | **82** | **90.11** | *95.52* |
| **G.C.College, Ankola** | ARTS | **35** | **30** | **85.71** | *86.36* |




ಪದವಿ ವಿಭಾಗದ ಬಿ.ಸಿಎ. ಅಂತಿಮ ಪರೀಕ್ಷೆಯಲ್ಲಿ ಟ್ರಸ್ಟಿನ ಬಿ.ಸಿ.ಎ.ಕಾಲೇಜು, ಕಾರವಾರ, ಶೇಕಡಾ 100ರಷ್ಟು ನೀಡಿದೆ. ಬಿ.ಎಡ್.ಕಾಲೇಜು, ದಾಂಡೇಲಿ, ಬಿ.ಎಡ್.ಪದವಿ ಪರೀಕ್ಷೆಯಲ್ಲಿ 97.78ರಷ್ಟು ಫಲಿತಾಂಶ ನೀಡಿದೆ. ವಾಣಿಜ್ಯ ವಿಭಾಗದಲ್ಲಿ (ಬಿ.ಕಾಂ) ಪರೀಕ್ಷೆಯಲ್ಲಿ ದಿವೇಕರ ವಾಣಿಜ್ಯ ಕಾಲೇಜು, ಕಾರವಾರ, 96.15ರಷ್ಟು ಫಲಿತಾಂಶ ನೀಡಿದೆ. ಅಂಕೋಲಾದ ಗೋಖಲೆ ಸೆಂಟಿನರಿ ಪದವಿ ಕಾಲೇಜು ಬಿ.ಎಸ್ಸಿ. ಪರೀಕ್ಷೆಯಲ್ಲಿ ಶೇಕಡಾ.90.11ರಷ್ಟು ಹಾಗೂ ಬಿ.ಎ. ಪರೀಕ್ಷೆಯಲ್ಲಿ ಶೇಕಡಾ 85.71ರಷ್ಟು ಫಲಿತಾಂಶ ನೀಡಿದೆ. ಉತ್ತಮ ಫಲಿತಾಂಶ ನೀಡಿದ ಕಾಲೇಜಿನ ಪ್ರಾಚಾರ್ಯರು, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಅಭಿನಂದನಾರ್ಹರು.

2011–2012 ರಲ್ಲಿ ಬಿ.ಎಸ್ಸಿ. ಅಂತಿಮ ವರ್ಷದ ಪರೀಕ್ಷೆಯಲ್ಲಿ ಗೋಖಲೆ ಸೆಂಟಿನರಿ ಪದವಿ ಕಾಲೇಜು ಉತ್ತಮ ಸಾಧನೆ ಮಾಡುವದರ ಜೊತೆಗೆ ವಿಶ್ವವಿದ್ಯಾಲಯಕ್ಕೆ 1ನೇ, 7ನೇ ಮತ್ತು 9ನೇ ರ್‍ಯಾಂಕ್‌ಗಳನ್ನು ಪಡೆದಿದ್ದಾರೆ. ಹಾಗೆಯೇ ಬಿ.ಕಾಂ. ಅಂತಿಮ ವರ್ಷದ ಪರೀಕ್ಷೆಯಲ್ಲಿ ದಿವೇಕರ ವಾಣಿಜ್ಯ ಕಾಲೇಜಿನ ಒರ್ವ ವಿದ್ಯಾರ್ಥಿ ವಿಶ್ವವಿದ್ಯಾಲಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದಾನೆ. ಈ ಎಲ್ಲ ವಿದ್ಯಾರ್ಥಿಗಳ ಸಾಧನೆ ಕಾಲೇಜಿಗೂ, ಟ್ರಸ್ಟಿಗೂ, ವಿಶ್ವವಿದ್ಯಾಲಯಕ್ಕೂ ಕೀರ್ತಿ ತಂದಿದೆ. ಎರಡು ಕಾಲೇಜಿನ ಪ್ರಾಚಾರ್ಯರಿಗೂ, ಅಧ್ಯಾಪಕರಿಗೂ ಹಾಗೂ ವಿದ್ಯಾರ್ಥಿಗಳಿಗೂ ಟ್ರಸ್ಟಿನ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಬರುವ ವರ್ಷ ಇನ್ನೂ ವಿಶೇಷ ಪ್ರಯತ್ನ ಮಾಡಿ ಫಲಿತಾಂಶ ಇನ್ನೂ ಹೆಚ್ಚಾಗುವ ದಿಕ್ಕಿನಲ್ಲಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿ ಕಾರ್ಯ ನಿರ್ವಹಿಸಬೇಕಾಗಿದೆ.

## 6. 2012–13ನೇ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ / ಅಧ್ಯಾಪಕರ ವಿಶೇಷ ಸಾಧನೆ

### ಗೋಖಲೆ ಸೆಂಟನರಿ ಕಾಲೇಜ್, ಅಂಕೋಲಾ

- ಅಂತಿಮ ವರ್ಷದ ಪದವಿ ವಿದ್ಯಾರ್ಥಿಗಳಲ್ಲಿ 3 ವಿದ್ಯಾರ್ಥಿಗಳನ್ನು ಕ್ಯಾಂಪಸ ಸಂದರ್ಶನದಲ್ಲಿ Wipro Technologies ಅವರು ಆಯ್ಕೆ ಮಾಡಿರುತ್ತಾರೆ
- ಕರ್ನಾಟಕ ವಿಶ್ವವಿದ್ಯಾಲಯದವರು ನೀಡುವ 10000/– ಮೊತ್ತದ Merit Scholarshipಗೆ 5 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ.
- ವಿದ್ಯಾಪೋಷಕ ಧಾರವಾಡ ಅವರು ಕಾಲೇಜಿನ 12 ವಿದ್ಯಾರ್ಥಿಗಳನ್ನು ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆ ಮಾಡಿದ್ದಾರೆ.
- ರಾಷ್ಟ್ರೀಯ ಮಟ್ಟದ ಸಂಸ್ಕೃತ ವಿದ್ಯಾರ್ಥಿ ವೇತನಕ್ಕೆ 5 ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ. ಅವರು ತಲಾ 4000/–ದಂತೆ ಸ್ಕಾಲರಶಿಫ ಪಡೆದಿರುವರು.
- ಕುಮಾರಿ ಪಂಕಜಾ ಎಸ್.ನಾಯಕ ಇವರು ಪಿ.ಎಸ್.ಕಾಮತ ಮೆಮೋರಿಯಲ್, ಎರಡನೆ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿರುತ್ತಾರೆ.

### ದಿವೇಕರ ವಾಣಿಜ್ಯ ಕಾಲೇಜ್, ಕಾರವಾರ

- ಬಿ.ಕಾಂ.ಅಂತಿಮ ಪರೀಕ್ಷೆಯಲ್ಲಿ ಕುಮಾರಿ ನಿರೀಕ್ಷಾ ಮಹಾಲೆ, ಶ್ವೇತಾಕುಮಾರಿ, ದಿವ್ಯಾ ಸ್ವಾರ ಮತ್ತು ಪ್ರಿಯಾಂಕಾ ಕುವಾಲೇಕರ ಇವರು ಅನುಕ್ರಮವಾಗಿ 93.66 / 92 / 91.22 / ಮತ್ತು 90.86 ರಷ್ಟು ಫಲಿತಾಂಶ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

### ಕೆನರಾ ವೆಲ್‌ಫೆರ್ ಟ್ರಸ್ಟ ಬಿ.ಸಿ.ಎ.ಕಾಲೇಜ್, ಕಾರವಾರ

- ಕುಮಾರಿ ರೂಬಿ ಕುಡ್ತಲಕರ ಇವರು ಐ.ಬಿ.ಎಮ್.ನವರು ನಡೆಸಿದ ಕ್ಯಾಂಪಸ್ ಸಿಲೇಕ್ಷನದಲ್ಲಿ ಆಯ್ಕೆಯಾಗಿದ್ದಾರೆ. ಇವರು ಬಿ.ಸಿ.ಎ.ಅಂತಿಮ ಪರೀಕ್ಷೆಯಲ್ಲಿ ಶೇಕಡಾ 83.51 ಅಂಕ ಪಡೆದಿರುತ್ತಾರೆ.
- ಕುಮಾರಿ ವಿನಯ ನಾಯ್ಕ ಇವರು ವಿಪ್ರೋದವರು ನಡೆಸಿದ ಕ್ಯಾಂಪಸ್ ಸಿಲೆಕ್ಷನದಲ್ಲಿ ಆಯ್ಕೆಯಾಗಿದ್ದಾರೆ. ಇವರು ಬಿ.ಸಿ.ಎ.ಅಂತಿಮ ಪರೀಕ್ಷೆಯಲ್ಲಿ ಶೇಕಡಾ 82.21 ಅಂಕ ಪಡೆದಿರುವರು.

### ದಿವೇಕರ ಪದವಿ ಪೂರ್ವ ಕಾಲೇಜು, ಕಾರವಾರ

- ದ್ವಿತೀಯ ಪಿಯುಸಿ ಕಾಮರ್ಸ ಪರೀಕ್ಷೆಯಲ್ಲಿ ಕುಮಾರಿ ಶುಭಶ್ರೀ ಕೋಡಲ್ಕರ ಇವರು ಶೇಕಡಾ 94.17, ಕುಮಾರಿ ಶ್ರೇಯಾ ರಾವ್ ಇವರು ಶೇಕಡಾ 93, ಕುಮಾರಿ ಅಶ್ವಿನಿ ನಾಯ್ಕ ಇವರು ಶೇಕಡಾ 92.33ರಷ್ಟು ಅಂಕ ಪಡೆದಿರುತ್ತಾರೆ.
- ಶ್ರೀ ರೋಶನ ಅಣ್ವೇಕರ ಇವರು ರಾಜ್ಯಮಟ್ಟದ ಪೆಂಟಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

## ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಶಿರಾಲಿ

- ಕುಮಾರ ಜಿ.ನಾಯ್ಕ ಇವರು ಪೋಲ್ ವಾಲ್ಟನಲ್ಲಿ ರಾಜ್ಯಮಟ್ಟದಲ್ಲಿ ಪ್ರಥಮನಾಗಿ ಹಾಗೂ ರಾಷ್ಟಮಟ್ಟದಲ್ಲಿ 4ನೇ ಸ್ಥಾನ ಪಡೆದು ಕಾಲೇಜಿಗೂ, ಟ್ರಸ್ಟಿಗೂ ಕೀರ್ತಿ ತಂದಿರುತ್ತಾನೆ.

## ಪಿ.ಎಮ್.ಹೈಸ್ಕೂಲ, ಅಂಕೋಲಾ

- Sports - Hurdles - ಕುಮಾರಿ ಮಾಧುರಿ ಚಂದ್ರಕಾಂತ ನಾಯ್ಕ ಇವಳು ಜಿಲ್ಲಾ ಮಟ್ಟದಲ್ಲಿ ಪ್ರಥಮರಾಗಿ ರಾಜ್ಯಮಟ್ಟದಲ್ಲಿ ಪ್ರತಿನಿಧಿಸಿರುವರು.
- ಕುಮಾರಿ ವಿನಂತಿ ಎಸ್.ನಾಯ್ಕ ಇವರು ಗಣಿತ ಪ್ರಾಚೀನ ವರ್ತಮಾನ ಭವಿಷ್ಯ ಕುರಿತು ಪ್ರಬಂಧನ ಮಂಡನೆ ಮಾಡಿ ರಾಜ್ಯಮಟ್ಟದಲ್ಲಿ ಆಯ್ಕೆಯಾಗಿದ್ದಾರೆ. ಕುಮಾರಿ ವಿನಂತಿ ನಾಯ್ಕ ಇವರು ಕ್ರುಗರ ಫೌಂಡೇಶನ ಆಯೋಜಿಸಿದ ಸಿ.ಎಮ್.ಜಿ.ಸದಸ್ಯರಾಗಿದ್ದು ಕರ್ನಾಟಕ ರಾಜ್ಯ ಮುಖ್ಯಮಂತ್ರಿಯವರ ನೇರ ಸಂವಾದ ಕಾರ್ಯಕ್ರದಲ್ಲಿ ಅಂಕೋಲಾ ತಾಲೂಕಿನ ಪ್ರತಿನಿಧಿಯಾಗಿ ಭಾಗವಹಿಸಿದ್ದಾರೆ.

## ಜನತಾ ವಿದ್ಯಾಲಯ, ಬಾಡ–ಕಾಗಾಲ

- ದಿನೇಶ ಶಿವಾನಂದ ನಾಯ್ಕ ಇವನು ಉತ್ತರ ಪ್ರದೇಶದ ಇಟಾವಾದಲ್ಲಿ ನಡೆದ ರಾಷ್ಟ್ರಮಟ್ಟದ ಎತ್ತರ ಜಿಗಿತ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾನೆ.

## ಜನತಾ ವಿದ್ಯಾಲಯ, ಶಿರಾಲಿ

- ಮುಕುಂದ ಮಂಜಯ್ಯ ದೇವಾಡಿಗ ಹಾಗೂ ಕುಮಾರಿ ಸಬನಮ ರುಕ್ಮಿದ್ದೀನ ಇವರು ರಾಜ್ಯಮಟ್ಟದ ಪೋಲ್ ವಾಲ್ಟ್ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನಪಡೆದು ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

## ಜನತಾ ವಿದ್ಯಾಲಯ, ಕಾಸರಕೋಡ

- ಶ್ರೀ ಅಭಿಷೇಕ ನಾರಾಯಣ ಗೌಡ ಇವರು ತ್ರಿವಿಧ ಜಿಗಿತ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಆಯ್ಕೆಯಾಗಿ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ 5ನೇ ಸ್ಥಾನ ಪಡೆದಿದ್ದಾರೆ.

## ಜನತಾ ವಿದ್ಯಾಲಯ, ಮೀರ್ಜಾನ–ಕೋಡಕಣಿ

- ರಾಜೇಶ ಎಂ.ಅಂಬಿಗ ಇವರು 800 ಮೀಟರ ಓಟದ ಸ್ಪರ್ಧೆಯಲ್ಲಿ, ರವಿರಾಜ ಎನ್.ಅಂಬಿಗ ಪೋಲ್ ವಾಲ್ಟ ಸ್ಪರ್ದೆಯಲ್ಲಿ, ಆನಂದ ವಿ.ಪಟಗಾರ ಇವರು ನಡಿಗೆ ಸ್ಪರ್ಧೆಯಲ್ಲಿ ಹಾಗೂ ತೇಜಾ ವಿ.ಉಪ್ಪಾರ ಇವರು ಪೋಲವಾಲ್ಟದಲ್ಲಿ ಜಿಲ್ಲೆಗೆ ಪ್ರಥಮವಾಗಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ.

- ಬೆಂಗಳೂರಿನಲ್ಲಿ ನಡೆದ ವಿಶ್ವ ಗೈಡ್ಸ ಶತಮಾನೋತ್ಸವ ಮುಕ್ತಾಯ ಸಮಾರಂಭದಲ್ಲಿ 'ರಸಪ್ರಶ್ನೆ' ಕಾರ್ಯಕ್ರಮದಲ್ಲಿ ಕುಮಾರಿ ನಿರ್ಮಲಾ ನಾಯ್ಕ ಜಿಲ್ಲಾ ಮಟ್ಟದಿಂದ ಆಯ್ಕೆಯಾಗಿ ರಾಜ್ಯಮಟ್ಟದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾಳೆ.
- ಈ ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸ್ಕೌಟ್ಸ ಮತ್ತು ಗೈಡ್ಸ ವಿಭಾಗದಲ್ಲಿ ರಾಷ್ಟ್ರ ಹೆಮ್ಮೆ ಪಡುವಂತೆ ವಿಶೇಷ ಸಾಧನೆ ಮಾಡಿದ್ದಾರೆ. ಅದರ ವಿವರವನ್ನು ಪ್ರತ್ಯೇಕವಾಗಿ ನೀಡಲಾಗಿದೆ.

## ಜನತಾ ವಿದ್ಯಾಲಯ, ಕಡತೋಕಾ

- ಸುನೀಲ ಗಣಪತಿ ನಾಯ್ಕ ಇವರು ಸ್ಕೌಟ್ಸನಲ್ಲಿ ರಾಜ್ಯ ಪುರಸ್ಕಾರ ಪಡೆದಿದ್ದಾರೆ.

## ಎಸ್.ಕೆ.ಪಿ.ಹೈಸ್ಕೂಲ, ಕತಗಾಲ

- ಗುರುರಾಜ ವಿ.ನಾಯಕ ಅಂಬಿಗ ಇವರು ಮಿಮಿಕ್ರಿಯ ಸ್ಪರ್ಧೆಯಲ್ಲಿ ಭಾಗವಹಿಸಿ ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿರುವರು

## ಜನತಾ ವಿದ್ಯಾಲಯ, ಅನಿಲಗೋಡ

- ಸ್ಕೌಟ್ಸ ಮತ್ತು ಗೈಡ್ಸದಲ್ಲಿ ಇಬ್ಬರು ವಿದ್ಯಾರ್ತಿಗಳು ರಾಜ್ಯಪಾಲರಿಂದ ಪುರಸ್ಕಾರ ಪಡೆದಿರುವರು
- ವೃತ್ತಿ ಶಿಕ್ಷಣದ ವಸ್ತು ಪ್ರದರ್ಶನದಲ್ಲಿ ಇಬ್ಬರು ವಿದ್ಯಾರ್ಥಿಗಳು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

## ಜನತಾ ವಿದ್ಯಾಲಯ, ಕುಳವೆ–ಬರೂರ

- ನಾಗರತ್ನ ಎಸ್.ಮೋಗೇರ ಇವಳು ರಾಜ್ಯಮಟ್ಟದ ಹರ್ಡಲ್ಸ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ

## ದಿನಕರ ಪ್ರಾಥಮಿಕ ಶಾಲೆ, ಧಾರೇಶ್ವರ

- ಕುಮಾರಿ ಸ್ನೇಹಾ ದೀಕ್ಷಿತ ಇವರು ಧಾರ್ಮಿಕ ಪಠಣ ಸ್ಪರ್ಧೆಯಲ್ಲಿ ಪ್ರಥಮ, ಕಥೆ ಹೇಳುವ ಸ್ಪರ್ದೆಯಲ್ಲಿ ತೃತೀಯ ಹಾಗೂ ಕುಮಾರಿ ನೇಹಾ ಭಟ್ಟ ಅಭಿನಯ ಗೀತೆಯಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ವಿಶೇಷ ಸಾಧನೆ ಮಾಡಿದ ಎಲ್ಲ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕ ವೃಂದದವರಿಗೆ, ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ.

## ಜನತಾ ವಿದ್ಯಾಲಯ, ಮಿರ್ಜಾನ-ಕೋಡಕಣಿ ಶಾಲೆಯ ವಿಶೇಷ ಸಾಧನೆ

ಜನತಾ ವಿದ್ಯಾಲಯ, ಮಿರ್ಜಾನ-ಕೋಡಕಣಿ ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಸ್ಕೌಟ್ ಮತ್ತು ಗೈಡ್ಸ್ ವಿಭಾಗದಲ್ಲಿ 2012-2013ನೇ ಸಾಲಿನಲ್ಲಿ ಮಾಡಿದ ಸಾಧನೆ ಉಲ್ಲೇಖನೀಯ.

ಸ್ಕೌಟ್ಸ್ ಮತ್ತು ಗೈಡ್ಸ್ ಶಿಕ್ಷಕರಾದ ಶ್ರೀ ರಾಜು ರಾಮಾ ನಾಯ್ಕರ ಮಾರ್ಗದರ್ಶನದಲ್ಲಿ 2012-2013ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ **ಜಿಲ್ಲಾಧಿಕಾರಿ ಇಂಕಾಂಗ್ಲೊ ಜಮೀರ** ಅವರಿಂದ 10 ಜನ ವಿದ್ಯಾರ್ಥಿಗಳು ಪ್ರಶಸ್ತಿ ಪತ್ರ ಪಡೆದಿರುತ್ತಾರೆ.

**ರಾಜ್ಯ ಮಟ್ಟದಲ್ಲಿ** ನಡೆದ ಸ್ಕೌಟ್ಸ್-ಗೈಡ್ಸ್ ಕಾರ್ಯಕ್ರಮದಲ್ಲಿ ವಿಜೇತರಾದ 8 ವಿದ್ಯಾರ್ಥಿಗಳು ಮತ್ತು 9 ವಿದ್ಯಾರ್ಥಿನಿಯರು **ರಾಜ್ಯಪಾಲರಿಂದ ಪ್ರಶಸ್ತಿ ಮತ್ತು ಪುರಸ್ಕಾರ ಪಡೆದಿರುವರು.**

**ರಾಷ್ಟ್ರ ಮಟ್ಟದ ಸ್ಪರ್ಧೆಯು ಜಾರ್ಖಂಡ ರಾಜ್ಯದಲ್ಲಿ** ನಡೆದಿದ್ದು, ಅಲ್ಲಿ 9 ವಿದ್ಯಾರ್ಥಿಗಳು ವಿಜೇತರಾಗಿ **ಅಂತರ್-ರಾಷ್ಟ್ರೀಯ ಮಟ್ಟದ** ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯ್ಕೆಯಾದರು. **ರಾಷ್ಟ್ರ ಮಟ್ಟದಲ್ಲಿ** ನಡೆದ ಕಾರ್ಯಕ್ರಮದಲ್ಲಿ 21 ರಾಜ್ಯಗಳಿಂದ ವಿದ್ಯಾರ್ಥಿ ಪ್ರತಿನಿಧಿಗಳು ಭಾಗವಹಿಸಿದ್ದರು.




ದಿನಾಂಕ 24-11-2012 ರಿಂದ 29-11-2012ರ ವರೆಗೆ ಬಂಗ್ಲಾದೇಶದ ಢಾಕಾ ನಗರದಲ್ಲಿ ನಡೆದ 24ನೇ ಏಷ್ಯಾ ಖಂಡದ ವಿಭಾಗ ಮಟ್ಟದಲ್ಲಿ ಸ್ಪರ್ಧಿಸಲು ಆಯ್ಕೆಯಾದ ಜನತಾ ವಿದ್ಯಾಲಯ, ಮಿರ್ಜಾನ-ಕೋಡಕಣಿ ಶಾಲೆಯ ಸಹಶಿಕ್ಷಕರು ಹಾಗೂ ಸ್ಕೌಟ್ಸ್-ಗೈಡ್ಸ್ ಶಿಕ್ಷಕರಾದ ಶ್ರೀ ರಾಜು ರಾಮಾ ನಾಯ್ಕ ಇವರು ಭಾಗವಹಿಸಿದ್ದರು. ಈ ವಿಭಾಗದಲ್ಲಿ 51 ದೇಶದ ಪ್ರತಿನಿದಿಗಳು ಭಾಗವಹಿಸಿದ್ದರು.



**ನೇಪಾಳ ದೇಶದ ಚಿತ್ವಾನ ಪ್ರದೇಶದಲ್ಲಿ SAARC ದೇಶಗಳ ಅಂತರ್-ರಾಷ್ಟ್ರೀಯ ಮಟ್ಟದಲ್ಲಿ** ನಡೆದ ಸಮ್ಮೇಳನದಲ್ಲಿ ಮಿರ್ಜಾನ ಶಾಲೆಯ ಒಟ್ಟು 8 ವಿದ್ಯಾರ್ಥಿಗಳು ಹಾಗೂ ಶಿಕ್ಷಕರಾದ ಶ್ರೀ ರಾಜು ರಾಮಾ ನಾಯ್ಕ ಇವರು ಆಯ್ಕೆಯಾಗಿ **ರಾಷ್ಟ್ರದ ಪ್ರತಿನಿಧಿಗಳಗಿ ಭಾಗವಹಿಸಿದ್ದರು.**






ನಮ್ಮ ಮಿರ್ಜಾನ ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತರ್-ರಾಷ್ಟ್ರೀಯ ಮಟ್ಟದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿ ಶಾಲೆಗೂ, ಜಿಲ್ಲೆಗೂ, ರಾಜ್ಯಕ್ಕೂ ಹಾಗೂ ರಾಷ್ಟ್ರಕ್ಕೂ ಕಿರ್ತಿಯನ್ನು ತಂದಿರುವದು ಶ್ಲಾಘನೀಯ.

ಈ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೂ ಹಾಗೂ ಶಿಕ್ಷಕಾರ ಶ್ರೀ ರಾಜು ರಾಮಾ ನಾಯ್ಕ ಇವರಿಗೆ ಟ್ರಸ್ಟಿನ ಪರವಾಗಿ ಮತ್ತು ತಮ್ಮೆಲ್ಲರ ಪರವಾಗಿ ಹಾರ್ದಿಕವಾಗಿ ಅಭಿನಂದಿಸುತ್ತೇನೆ.

## 7. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು

2012–2013ನೇ ಸಾಲಿನಲ್ಲಿ ನೇಮಕಾತಿ ಹೊಂದಿದ ಅನುದಾನಿತ ಶಿಕ್ಷಕರ ವಿವರ ಈ ಕೆಳಗಿನಂತಿದೆ.

| ಅ.ನಂ. | ಶಿಕ್ಷಕರ ಹೆಸರು | ವಿಷಯ | ನೇಮಕಗೊಂಡ ಶಾಲೆ |
|---|---|---|---|
| 1 | ಶ್ರೀಮತಿ ಶ್ರುತಿ ರತ್ನಾಕರ ನಾಯ್ಕ | ಪಿ.ಸಿ.ಎಮ್. | ಜನತಾ ವಿದ್ಯಾಲಯ ಕುಳವೆ-ಬರೂರ |
| 2 | ಶ್ರೀ ಚಂದ್ರಶೇಖರ ಕಡೇಮನಿ | ಪಿ.ಸಿ.ಎಮ್. | ಜನತಾ ವಿದ್ಯಾಲಯ, ದಾಂಡೇಲಿ |
| 3 | ಶ್ರೀಮತಿ ಅರುಣಾ ಹೆಗಡೆ | ಪಿ.ಸಿ.ಎಮ್. | ಜನತಾ ವಿದ್ಯಾಲಯ, ದಾಂಡೇಲಿ |
| 4 | ಶ್ರೀಮತಿ ಲಕ್ಷ್ಮೀ ಬಿ.ಪಾಟೀಲ | ಸಿ.ಬಿ.ಝಡ್. | ಜನತಾ ವಿದ್ಯಾಲಯ, ದಾಂಡೇಲಿ |
| 5 | ಶ್ರೀ ಜಯದೇವಕುಮಾರ ಸಿರಿಗೇರಿ | ಕಲಾ | ಜನತಾ ವಿದ್ಯಾಲಯ, ದಾಂಡೇಲಿ |
| 6 | ಶ್ರೀಮತಿ ಮುತ್ತಮ್ಮ ಹರಿಜನ | ಹಿಂದಿ | ಜನತಾ ವಿದ್ಯಾಲಯ, ದಾಂಡೇಲಿ |

31, ಡಿಸೆಂಬರ 2008ರ ವರೆಗಿನ ಖಾಲಿ ಇರುವ ಎಲ್ಲ 5 ಹುದ್ದೆಗಳಿಗೆ ನೇಮಕಾತಿಗಾಗಿ ಇಲಾಖೆಯಿಂದ ಅನುಮೋದನೆ ಪಡೆದು ದಿನಾಂಕ 01-06-2013ರಂದು ಆಯ್ಕೆ ಸಮಿತಿ ಸಂದರ್ಶನ ನಡೆಸಿ ಈ ಕೆಳಗಿನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

| ಅ.ನಂ. | ಶಿಕ್ಷಕರ ಹೆಸರು | ವಿಷಯ | ನೇಮಕಗೊಂಡ ಶಾಲೆ |
|---|---|---|---|
| 1 | ಶ್ರೀ ಮಗದುಮ್ ಅಲಗೋಡಿ | ಉರ್ದು | ಪಿ.ಎಮ್.ಹೈಸ್ಕೂಲ, ಅಂಕೋಲಾ |
| 2 | ಶ್ರೀಮತಿ ರಂಜನಾ ಬಿ. | ಕಲಾ | ಜನತಾ ವಿದ್ಯಾಲಯ, ಬಾಡ-ಕಾಗಾಲ |
| 3 | ಶ್ರೀಮತಿ ನಿಖಿತಾ ನಾಯ್ಕ | ಪಿ.ಸಿ.ಎಮ್. | ಜನತಾ ವಿದ್ಯಾಲಯ, ಮುದಗಾ |
| 4 | ಶ್ರೀ ಶಿವಾನಂದ ಸವಸುದ್ದಿ | ಇಂಗ್ಲೀಷ | ಪಿ.ಎಮ್.ಹೈಸ್ಕೂಲ, ಅಂಕೋಲಾ |
| 5 | ಶ್ರೀ ವಿಜಯಕುಮಾರ ಬಿ.ಎಮ್. | ಕನ್ನಡ | ಜನತಾ ವಿದ್ಯಾಲಯ, ಕಡವಾಡ |

ಅವರ ನೇಮಕಾತಿ ಪ್ರಸ್ತಾವನೆ ಇಲಾಖೆಗೆ ಸಲ್ಲಿಸಲಾಗಿದ್ದು, ಅನುಮೋದನೆಯ ನಿರೀಕ್ಷೆಯಲ್ಲಿದ್ದೇವೆ.

1993–94ನೇ ಸಾಲಿನಲ್ಲಿ ಅನುದಾನ ರಹಿತವಾಗಿ ಪ್ರಾರಂಭಿಸಿದ ಪಿ.ಎಂ.ಪದವಿ ಪೂರ್ವ ಕಾಲೇಜ್, ಅಂಕೋಲಾ, ಇದು ದಿನಾಂಕ 25–08–2012ರಿಂದ ಅನುದಾನಕ್ಕೆ ಒಳಪಡಿಸಿ ಕರ್ನಾಟಕ ಸರಕಾರ ಆದೇಶ ಹೊರಡಿಸಿದೆ. ಈ ಆದೇಶದ ಪ್ರಕಾರ ಅಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಈ ಕೆಳಗೆ ನಮೂದಿಸಿದ ಸಿಬ್ಬಂದಿಗಳು ವೇತನ ಅನುದಾನಕ್ಕೆ ಒಳಪಟ್ಟಿರುತ್ತಾರೆ.

| | | |
|---|---|---|
| 1 | ಶ್ರೀ ರಮಾನಂದ ಬಿ.ನಾಯಕ | ಇಂಗ್ಲೀಷ ಉಪನ್ಯಾಸಕರು |
| 2 | ಶ್ರೀ ಉಲ್ಲಾಸ ಶ್ಯಾಮ ಹುದ್ದಾರ | ರಾಜ್ಯಶಾಸ್ತ್ರ ಉಪನ್ಯಾಸಕರು |
| 3 | ಶ್ರೀ ಅರವಿಂದ ಬಿ.ಆಗೇರ | ಇತಿಹಾಸ ಉಪನ್ಯಾಸಕರು |
| 4 | ಶ್ರೀ ರಮೇಶ ಗೌಡ ಎಂ | ಅರ್ಥಶಾಸ್ತ್ರ ಉಪನ್ಯಾಸಕರು |
| 5 | ಶ್ರೀ ಶ್ರೀನಿವಾಸ ಯು.ಕೆ | ಸಮಾಜಶಾಸ್ತ್ರ ಉಪನ್ಯಾಸಕರು |
| 6 | ಶ್ರೀ ಫಾಲ್ಗುಣ ಸಿ.ಗೌಡ | ಕನ್ನಡ ಉಪನ್ಯಾಸಕರು |
| 7 | ಶ್ರೀ ವಿನಾಯಕ ಜಿ.ನಾಯ್ಕ | ದ್ವಿತೀಯ ದರ್ಜೆ ಸಹಾಯಕರು |

ಈ ಕಾಲೇಜಿಗೆ ಬೇಕಾಗುವ ಪ್ರಿನ್ಸಿಪಾಲರ ಹುದ್ದೆಯನ್ನು ಸೃಜಿಸಿರುವದಿಲ್ಲ. ಸರಕಾರದ ಆದೇಶದ ಪ್ರಕಾರ ಕಾಲೇಜಿನ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳಲು, ಪ್ರಿನ್ಸಿಪಾಲರು ಕರ್ತವ್ಯಗಳನ್ನು ನಿರ್ವಹಿಸಲು ಅನುದಾನಕ್ಕೆ ಒಳಪಟ್ಟಿರುವ ಉಪನ್ಯಾಸಕರಲ್ಲಿ ಒಬ್ಬರನ್ನು ಸೇವಾ ಜೇಷ್ಠತೆಗೆ ಅನುಗುಣವಾಗಿ ತಾತ್ಕಾಲಿಕವಾಗಿ ಪ್ರಭಾರ ಪ್ರಾಚಾರ್ಯರಾಗಿ ನೇಮಿಸಬೇಕಾದುದರಿಂದ ಆಡಳಿತ ಮಂಡಳಿಯು ಸೇವಾ ಜೇಷ್ಠತೆ ಆಧಾರದ ಮೇಲೆ ಶ್ರೀ ಫಾಲ್ಗುಣ ಸಿ.ಗೌಡ, ಕನ್ನಡ ಉಪನ್ಯಾಸಕರನ್ನು ಪ್ರಭಾರ ಪ್ರಾಚಾರ್ಯರಾಗಿ ತಾತ್ಕಾಲಿಕವಾಗಿ ನೇಮಕ ಮಾಡಬೇಕೆಂದು ನಿರ್ಧರಿಸಿದ ಪ್ರಕಾರ ಅವರನ್ನು ಪ್ರಭಾರ ಪ್ರಾಚಾರ್ಯರನ್ನಾಗಿ ನೇಮಕ ಮಾಡಾಲಾಗಿದೆ.

ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜು ಹಾಗೂ ದಿವೇಕರ್ ವಾಣಿಜ್ಯ ಪದವಿ ಪೂರ್ವ ಕಾಲೇಜು 2001ರಲ್ಲಿ ಸರ್ಕಾರದ ಆದೇಶದಂತೆ ಸಂಯುಕ್ತ ಕಾಲೇಜುಗಳಿಂದ ಬೇರ್ಪಟ್ಟರು ಸರ್ಕಾರ ಇದುವರೆಗೆ ಉಪನ್ಯಾಸಕರ ನೇಮಕಾತಿಗೆ ಅನುಮತಿ ನೀದಿರುವದಿಲ್ಲ. ಒಟ್ಟು 12 ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡುವಂತೆ ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಲ್ಲಿ 9 ಹುದ್ದೆಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಅನುಮೋದನೆ ದೊರೆತು 4 ವರ್ಷಗಳು ಕಳೆದರೂ ಇದುವರೆಗೆ ಹುದ್ದೆಗಳನ್ನು ಭರ್ತಿ ಮಾಡಲು ಆದೇಶ ನೀಡಿರುವದಿಲ್ಲ. ಈ ಹಿಂದೆ ಆಡಳಿತಾತ್ಮಕ ಅನುಮೋದನೆ ನೀಡಿದ 9 ಹುದ್ದೆಗಳಲ್ಲಿ ಕೇವಲ 4 ಹುದ್ದೆಗಳನ್ನು ತುಂಬಲು ಇಲಾಖೆಯಿಂದ ಸುತ್ತೋಲೆ ಬಂದಿದ್ದು ಅವುಗಳ ಮಾಹಿತಿಯನ್ನು ಇಲಾಖೆಗೆ ಕಳುಹಿಸಲಾಗಿದೆ. ಹುದ್ದೆಗಳನ್ನು ತುಂಬಲು ಅನುಮತಿ ನೀಡುವಲ್ಲಿ ಸರ್ಕಾರ ವಿಳಂಬ ನೀತಿಯನ್ನು ಅನುಸರಿಸುತ್ತಿರುವದರಿಂದ ಈ ಪದವಿ ಪೂರ್ವ ಕಾಲೇಜುಗಳನ್ನು ನಡೆಸುವದು ಟ್ರಸ್ಟಿಗೆ ಆರ್ಥಿಕವಾಗಿ ಬಹಳ ಸಮಸ್ಯೆಯಾಗಿದೆ. ಇದೇ ರೀತಿ ಸರ್ಕಾರದ ಧೋರಣೆ ಮುಂದುವರೆದರೆ ಕಾಲೇಜುಗಳನ್ನು ತಾತ್ಕಾಲಿಕ ಉಪನ್ಯಾಸಕರಿಂದ ನಡೆಸಿಕೊಂಡು ಹೋಗುವದು ಮುಂದಿನ ದಿನಗಳಲ್ಲಿ ಟ್ರಸ್ಟಿಗೆ ಒಂದು ಸಮಸ್ಯೆಯಾಗಬಹುದು. ಈ ಎರಡೂ ಕಾಲೇಜಿಗೆ ಕಳೆದ ವರ್ಷ ವೇತನ ನೀಡುವ ಸಲುವಾಗಿ ಆಡಳಿತ ಮಂಡಳಿ ಖಾತೆಯಿಂದ ನೀಡಿದ ಒಟ್ಟು ಮೊತ್ತ ರೂ.12,59,953/–

## 8. ಟ್ರಸ್ಟು ಪ್ರಕಟಿಸಿದ ಪುಸ್ತಕ

ಟ್ರಸ್ಟು ಈ ಹಿಂದೆ ಡಾ.ದಿನಕರ ದೇಸಾಯಿಯವರ ಜನ್ಮ ಶತಾಬ್ದಿ ನೆನಪಿಗಾಗಿ ಪ್ರಕಟಿಸಿದ (1) ಸಮಗ್ರ ಕಾವ್ಯ (2) ದಿನಕರ ಚೌಪದಿ – ಈ ಪುಸ್ತಕಗಳ ಮಾರಾಟದಿಂದ ಟ್ರಸ್ಟಿಗೆ ರೂ.3,30,716/– ಸಂದಾಯವಾಗಿದೆ.



ಈ ಪುಸ್ತಕಗಳ ಪ್ರಕಟಣೆಗಾಗಿ ಒಟ್ಟೂ ರೂ.2,02,426/– ಖರ್ಚು ಮಾಡಲಾಗಿತ್ತು. ಈ ಎರಡು ಪುಸ್ತಕ ಪ್ರಕಟಿಸಿ ಮಾರಾಟ ಮಾಡಿದ್ದರಿಂದ ಟ್ರಸ್ಟಿಗೆ ರೂ.1,28,290/– ಉಳಿತಾಯವಾಗಿದೆ.

ಪ್ರಕಟಿಸಿದ ಈ ಪುಸ್ತಕದಲ್ಲಿ ಸಮಗ್ರ ಕಾವ್ಯದ 260 ಪ್ರತಿಗಳು ಹಾಗೂ ದಿನಕರ ಚೌಪದಿಯ 279 ಪ್ರತಿಗಳು ಟ್ರಸ್ಟಿನ ಕಾರ್ಯಾಲಯದಲ್ಲಿ ಉಳಿದಿದೆ. ಈ ಪುಸ್ತಕದ ಪ್ರತಿಗಳನ್ನು ಸಂಸ್ಥೆಯ ಎಲ್ಲಾ ಶಾಲಾ/ಕಾಲೇಜುಗಳು ತಾವು ಹಾಕಿಕೊಳ್ಳುವ ಕಾರ್ಯಕ್ರಮದಲ್ಲಿ ನೆನಪಿನ ಕಾಣಿಕೆಯಾಗಿ ನೀಡುವದಿದ್ದಲ್ಲಿ ಈ ಪುಸ್ತಕಗಳನ್ನು ನೀಡಬಹುದೆಂದು ಕಳೆದ ವರ್ಷದ ವಾರ್ಷಿಕ ವರದಿಯಲ್ಲಿ ತಿಳಿಸಲಾಗಿತ್ತು. ಈ ಎರಡು ಪುಸ್ತಕವನ್ನು ರಿಯಾಯತಿ ದರದಲ್ಲಿ ಅಂದರೆ ರೂ.400/–ಕ್ಕೆ ನೀಡಲು ಟ್ರಸ್ಟು ನಿರ್ಧರಿಸಿತ್ತು. ಕೆಲವೇ ಶಾಲಾ/ಕಾಲೇಜಿನವರು ಈ ಪುಸ್ತಕಗಳನ್ನು ಖರೀದಿಸಿದ್ದಾರೆ. ದಯವಿಟ್ಟು ಈ ವರ್ಷ ಹೆಚ್ಚಿನ ಸಂಖ್ಯೆಯಲ್ಲಿ ಶಾಲಾ/ಕಾಲೇಜಿನವರು ಈ ಪುಸ್ತಕವನ್ನು ರಿಯಾಯತಿ ದರದಲ್ಲಿ ಖರೀದಿಸಬೇಕೆಂದು ಇನ್ನೊಮ್ಮೆ ವಿನಂತಿಸುತ್ತೇನೆ.

ಈ ಪುಸ್ತಕದ ಪ್ರಕಟಣೆಯ ಜವಾಬ್ದಾರಿ ತೆಗೆದುಕೊಂಡು ಪುಸ್ತಕ ಪ್ರಕಟಿಸಿ ಕೊಟ್ಟ ಹಾಗೂ ಮಾರಾಟದಲ್ಲೂ ಸಹಕಾರ ನೀಡಿದ ಶ್ರೀ ವಿಷ್ಣು ನಾಯ್ಕರಿಗೆ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

## 9. ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು

- ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ಕಡತೋಕಾದ ಸುವರ್ಣ ಭವನ ನಿರ್ಮಾಣದ ಕಾರ್ಯಕ್ಕೆ ಈ ವರ್ಷ 2,85,000/– ಖರ್ಚು ಮಾಡಲಾಗಿದೆ. ಈ ಹಣವನ್ನು ಸುವರ್ಣ ಮಹೋತ್ಸವದ ನಿಧಿಯಿಂದ ಮಾಡಲಾಗಿದೆ.
- ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ಶಿರಾಲಿಯಲ್ಲಿ ಪಿಠೋಪಕರಣಕ್ಕೆ ರೂ.1,45,515/– ಹಾಗೂ ಬಾಲಮಂದಿರದ 2 ಕೋಣೆಗಳ ನಿರ್ಮಾಣಕ್ಕೆ ರೂ.4,12,000/– ಹಾಗೂ ಬಾಲಮಂದಿರದ ಹತ್ತಿರ ಇರುವ ಆಲದ ಮರಕ್ಕೆ ಕಟ್ಟೆ ಕಟ್ಟಲು ರೂ.22,380/– ಹೀಗೆ ಒಟ್ಟೂ ಖರ್ಚು 5,79,895/– ಈ ಖರ್ಚನ್ನು ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

- ❖ ಪಿ.ಎಂ.ಹೈಸ್ಕೂಲ, ಅಂಕೋಲಾದಲ್ಲಿ ಡಾ.ದಿನಕರ ದೇಸಾಯಿ ಶತಮಾನೋತ್ಸವ ಕಟ್ಟಡದ 2ನೇ ಅಂತಸ್ಥಿನ ಕಾರ್ಯಕ್ಕೆ ಒಟ್ಟೂ ರೂ.7,20,446/– ವಿನಿಯೋಗವಾಗಿರುತ್ತದೆ. ಈ ಕಾರ್ಯಕ್ಕೆ ಶ್ರೀ ಬಸವರಾಜ ಹೊರಟ್ಟಿ, ಎಮ್.ಎಲ್.ಸಿ. ಅವರು ನೀಡಿದ ಪ್ರದೇಶಾಭಿವೃದ್ಧಿ ನಿಧಿಯಿಂದ ನೀಡಿದ ರೂ.1,87,350/–, ಶ್ರೀಮತಿ ನಿರ್ಮಲಾ ನಾಯಕ ಅವರು ನೀಡಿದ ದೇಣಿಗೆ ರೂ.2,00,000/– ಹಾಗೂ ಇತರ ಸ್ಥಳೀಯರ ದೇಣಿಗೆ ಹಣ ರೂ.3,33,093/– ಬಳಸಲಾಗಿದೆ.

- ❖ ಪಿ.ಎಂ.ಆಂಗ್ಲಮಾದ್ಯಮ ಪ್ರೌಢಶಾಲೆಯ ಪಿಠೋಪಕರಣ ಖರೀದಿ, ಕಂಪ್ಯೂಟರ ಮತ್ತು ಪ್ರಿಂಟರ ಖರೀದಿಯ ಬಗ್ಗೆ ಒಟ್ಟೂ 1,21,299/– ಖರ್ಚು ಮಾಡಲಾಗಿದೆ. ಈ ಹಣವನ್ನು ಶಾಲೆಯ ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

- ❖ ಜನತಾ ವಿದ್ಯಾಲಯ, ಬಾಡ–ಕಾಗಾಲ ಶಾಲೆಯ ರಿಪೇರಿಗಾಗಿ ಒಟ್ಟೂ ರೂ.25,953/– ಖರ್ಚು ಮಾಡಲಾಗಿದೆ. ಈ ಹಣವನ್ನು ಟ್ರಸ್ಟ ಖಾತೆಯಿಂದ ಪಾವತಿಸಲಾಗಿದೆ.

- ❖ ಜನತಾ ವಿದ್ಯಾಲಯ, ಕಡವಾಡ ಶಾಲೆ ಕಂಪ್ಯೂಟರ ಲ್ಯಾಬಿಗೆ ಇಲೆಕ್ಟ್ರಿಕ್ ವಾಯರಿಂಗ ಬಗ್ಗೆ ರೂ.24,000/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ. ಕುಡಿಯುವ ನೀರಿನ ವ್ಯವಸ್ಥೆಗಾಗಿ ರೂ.39,000/– ಕಡವಾಡ ಗ್ರಾಮ ಪ್ಂಚಾಯತ ನೀಡಿದೆ. ಅಕ್ಷರ ದಾಸೋಹ ಕೊಠಡಿಗೆ ತಾಲೂಕ ಪಂಚಾಯತ ಕಾರವಾರ ಇವರು ರೂ.3,70,900/– ಬಿಡುಗಡೆ ಮಾಡಿದ್ದಾರೆ. ಒಟ್ಟೂ ಈ ಕಾರ್ಯಕ್ಕೆ 4,33,900/– ಖರ್ಚಾಗಿದೆ.

- ❖ ಜನತಾ ವಿದ್ಯಾಲಯ, ಕಾಸರಕೋಡ ಶಾಲೆಯ ರಿಪೇರಿಗೆ ರೂ.8645/– ಖರ್ಚಾಗಿದೆ. ಇದನ್ನು ಆಡಳಿತ ಮಂಡಳಿ ಖಾತೆಯಿಂದ ಭರಿಸಲಾಗಿದೆ.

- ❖ ಜನತಾ ವಿದ್ಯಾಲಯ, ಮುರ್ಡೇಶ್ವರ ಶಾಲೆಯ ಕ್ವಾರ್ಟರ್ಸ ರಿಪೇರಿಗೆ ಒಟ್ಟೂ ರೂ.1,85,210/– ಖರ್ಚಾಗಿದೆ. ಈ ಹಣವನ್ನು ಟ್ರಸ್ಟಿನಿಂದ ಪಾವತಿಸಲಾಗಿದೆ.

- ❖ ಜನತಾ ವಿದ್ಯಾಲಯ, ಮಿರ್ಜಾನ–ಕೋಡಕಣಿ ಶಾಲೆಯ ಶೌಚಾಲಯ ಕಟ್ಟಡದ ರಿಪೇರಿ ಬಗ್ಗೆ ರೂ.41,613/– ಖರ್ಚು ಮಾಡಲಾಗಿದೆ. ಈ ಹಣವನ್ನು ಟ್ರಸ್ಟಿನಿಂದ ಪಾವತಿಸಲಾಗಿದೆ.

- ❖ ಜನತಾ ವಿದ್ಯಾಲಯ, ಧಾರೇಶ್ವರ ಶಾಲೆಯ ಶೌಚಾಲಯಕ್ಕೆ ರೂ. 1,00,000/– ಖರ್ಚಾಗಿದೆ. ಈ ಹಣವನ್ನು ದಾನಿಗಳ ದೇಣಿಗೆಯಿಂದ ಮಾಡಲಾಗಿದೆ. ಸಭಾಭವನ ಕಟ್ಟಡ ನಿರ್ಮಾಣ ಅಂತಿಮ ಹಂತದಲ್ಲಿದ್ದು ಈ ಕಾರ್ಯಕ್ಕೆ 3,00,000/– ಖರ್ಚಾಗಿದೆ. ಈ ಹಣವನ್ನು ತಾಲೂಕಾ ಪಂಚಾಯತ ಹಾಗೂ ಜಿಲ್ಲಾ ಪಂಚಾಯತ ನೀಡಿದೆ. ಒಟ್ಟೂ ರೂ. 4,00,000/– ವಿನಿಯೋಗವಾಗಿದೆ.

- ❖ ಜನತಾ ವಿದ್ಯಾಲಯ, ಅನಿಲಗೋಡ ಶಾಲೆಗೆ ರಿಪೇರಿ ಬಗ್ಗೆ ಒಟ್ಟೂ 14,423/– ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ಭರಿಸಲಾಗಿದೆ.

- ಎಸ್.ಕೆ.ಪಿ.ಹೈಸ್ಕೂಲ, ಕತಗಾಲ ಶಾಲೆಗೆ ಹೊಸದಾಗಿ 4 ಕೋಣೆಗಳನ್ನು ಹಾಗೂ ಅದರ ಮೇಲೆ ಸಭಾಭವನ ಕಟ್ಟುವ ಕೆಲಸ ಪ್ರಗತಿಯಲ್ಲಿದೆ. ಈಗಾಗಲೇ ಈ ಕಟ್ಟಡಕ್ಕೆ ರೂ.32 ಲಕ್ಷ ಖರ್ಚು ಮಾಡಲಾಗಿದೆ. ಹಣವನ್ನು ದಾನಿಗಳಾದ ಶ್ರೀ ವಿ.ಎಂ.ಜಾಲಿಸತ್ಗಿ ಹಾಗೂ ಅವರ ಕುಟುಂಬದವರು ನೀಡಿದ್ದಾರೆ. ಸಭಾಭವನವನ್ನು ಕೂಡಾ ಅವರೆ ಕಟ್ಟಿಸಿ ಕೊಡುವದಾಗಿ ತಿಳಿಸಿದ್ದಾರೆ. ಅವರಿಗೆ ಟ್ರಸ್ಟಿನ ಪರವಾಗಿ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ. ಇದರ ಹೊರತಾಗಿ ಶಾಲೆಯ ಮುಂದುಗಡೆ ಧ್ವಜಸ್ಥಂಭ ನೂತನವಾಗಿ ರೂ.20,000/– ವೆಚ್ಚದಲ್ಲಿ ನಿರ್ಮಿಸಲಾಗಿದೆ. ಈ ಕಾರ್ಯಕ್ಕೆ ಶ್ರೀ ಗಜಾನನ ಪೈ ಮತ್ತು ಇತರರು ದೇಣಿಗೆ ನೀಡಿದ್ದಾರೆ. ಕಬಡ್ಡಿ, ಖೋಖೋ ಕೋರ್ಟ್ ನಿರ್ಮಾಣಕ್ಕೆ ಹಾಗೂ ಗಾರ್ಡನ್ ಅಭಿವೃದ್ಧಿಗೆ ರೂ.1,15,000/– ಖರ್ಚುಮಾಡಲಾಗಿದೆ. ಈ ಹಣವನ್ನು ಯುವಜನ ಇಲಾಖೆ, ಕಾರವಾರ ಅವರು ನೀಡಿದ್ದಾರೆ. ಶಾಲೆಯ ಸುಣ್ಣ–ಬಣ್ಣಕ್ಕೆ ಆದ ಖರ್ಚು ರೂ.30,000/– ಟ್ರಸ್ಟಿನಿಂದ ನೀಡಲಾಗಿದೆ. ಬಿಸಿ ಊಟದ ಅಡಿಗೆ ಕೋಣೆ ನಿರ್ಮಾಣದ ಬಗ್ಗೆ ಜಿಲ್ಲಾ ಪಂಚಾಯತ, ಕಾರವಾರ ರೂ.3,15,000/– ನೀಡಿದೆ. ಈ ಕೆಲಸವನ್ನು ಈ ವರ್ಷ ಕೈಗೆತ್ತಿಕೊಳ್ಳಲಾಗುವುದು. ಈ ಶಾಲೆಗೆ ಒಟ್ಟು ಈ ವರ್ಷ ರೂ.36,80,000/– ಖರ್ಚುಮಾಡಲಾಗಿದೆ.

- ಜನತಾ ವಿದ್ಯಾಲಯ, ಕುಳವೆ–ಬರೂರ ಶಾಲೆಯ ಸಭಾಭವನದ ಮೇಲ್ಭಾಗದ ಕಟ್ಟಡಕ್ಕೆ ರೂ.6,00,000/– ಖರ್ಚಾಗಿದೆ. ಶಾಲಾ ಕೈತೋಟ ನಿರ್ಮಾಣಕ್ಕೆ 35,000/– ಖರ್ಚಾಗಿದೆ. ಒಟ್ಟೂ ಖರ್ಚಾದ ರೂ.6,35,000/–ದಲ್ಲಿ 3 ಲಕ್ಷ ಟ್ರಸ್ಟಿನಿಂದ, 4 ಲಕ್ಷ ಶಾಲೆಯ ಪೂರ್ವ ವಿದ್ಯಾರ್ಥಿ ಒಕ್ಕೂಟ ಹಾಗೂ ಶಾಲಾ ಅಭಿವೃದ್ಧಿ ಸಹಕಾರದಿಂದ ಮಾಡಲಾಗಿದೆ.

- ಆಂಗ್ಲ ಮಾಧ್ಯಮ ಪೂರ್ವ ಪ್ರಾಥಮಿಕ ಶಾಲೆ, ದಾಂಡೇಲಿ ಇದರ ಮೇಲ್ಛಾವಣಿ ರಿಪೇರಿ ಬಗ್ಗೆ ರೂ.7400/–, ಅಡಿಗೆ ಕೋಣೆ ರಿಪೇರಿ ಬಗ್ಗೆ ರೂ.5130/–, ಇಂಟರನೆಟ ಜೋಡಣೆಗೆ ರೂ.15,478/– ಒಟ್ಟೂ 28,008/– ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

- ಡಾ.ದಿನಕರ ದೇಸಾಯಿ ಸ್ಮಾರಕ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ಅಂಕೋಲಾ ಈ ಶಾಲೆಗೆ ಪಿಠೋಪಕರಣ, ಕಂಪ್ಯೂಟರ ಹಾಗೂ ಶೌಚಾಲಯ ನಿರ್ಮಾಣಕ್ಕೆ ಒಟ್ಟೂ 1,86,337/– ಖರ್ಚಾಗಿರುತ್ತದೆ. ಈ ಹಣವನ್ನು ಶಾಲೆಯ ಆಡಳಿತ ಮಂಡಳಿ ಖಾತೆಯಿಂದ ಭರಿಸಲಾಗಿದೆ.

- ಬಿ.ಇಡಿ. ಕಾಲೇಜ್, ದಾಂಡೇಲಿಯ ಆವಾರದ ಗೋಡೆ ಕಟ್ಟಲು ರೂ.3,13,010/– ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.

- ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ್, ದಾಂಡೇಲಿಯ ಕಟ್ಟಡ ರಿಪೇರಿ ಬಗ್ಗೆ ರೂ.98,655/–, ಸಿಲ್ವರ್ ಜ್ಯುಬಲಿ ಹಾಲಿನ ಮೇಲ್ಛಾವಣಿ ರಿಪೇರಿ ಹಾಗೂ ಶೀಟ್ ಕೂಡ್ರಿಸಿದ ಬಗ್ಗೆ ರೂ.8,50,315/– ಒಟ್ಟು ರೂ.9,48,970 ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ವಿನಿಯೋಗಿಸಲಾಗಿದೆ.

- ಜನತಾ ವಿದ್ಯಾಲಯ, ದಾಂಡೇಲಿ ಶಾಲೆಯ ರಿಪೇರಿ ಬಗ್ಗೆ, ಗೇಟ್ ಕೂಡ್ರಿಸುವ ಬಗ್ಗೆ, ಗಾರ್ಡನ್ ನವೀಕರಣದ ಬಗ್ಗೆ, ಸಿಬ್ಬಂದಿಗಳ ಶೌಚಾಲಯದ ಬಗ್ಗೆ ಒಟ್ಟು ರೂ.4,17,266/– ಖರ್ಚುಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.
- ಇಂಗ್ಲೀಷ ಹಾಗೂ ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ, ದಾಂಡೇಲಿಯಲ್ಲಿ ಶೌಚಾಲಯ ರಿಪೇರಿ, ಕಟ್ಟಡ ರಿಪೇರಿ ಮುಂತಾದ ಕೆಲಸಗಳಿಗೆ ಒಟ್ಟು ರೂ.1,45,536/– ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.
- ಕಳೆದ ವರ್ಷದ ವಾರ್ಷಿಕ ಸಭೆಯಲ್ಲಿ ಗೋಖಲೆ ಸೆಂಟಿನರಿ ಪದವಿ ಕಾಲೇಜಿನ ಪ್ರಾಚಾರ್ಯರು ಕಾಲೇಜಿನಲ್ಲಿ ಹೆಚ್ಚುವರಿಯಾದ 100 ಡೆಸ್ಕ್ ಹಾಗೂ 16 ಬೆಂಚ್‌ಗಳನ್ನು ಟ್ರಸ್ಟು ನಡೆಸುತ್ತಿರುವ ಬೇರೆ ಸಂಸ್ಥೆಯ ಉಪಯೋಗಕ್ಕಾಗಿ ನೀಡುವದಾಗಿ ತಿಳಿಸಿದ್ದರು. ಅವರು ನೀಡಿದ ಡೆಸ್ಕು ಬೆಂಚ್‌ಗಳಲ್ಲಿ 70 ಡೆಸ್ಕ್‌ಗಳನ್ನು ಹಾಗೂ 16 ಬೆಂಚ್‌ಗಳನ್ನು ರಿಪೇರಿ ಮಾಡಿಸಿ ಜನತಾ ವಿದ್ಯಾಲಯ, ದಾಂಡೇಲಿ ಶಾಲೆಗೂ ಹಾಗೂ 30 ಡೆಸ್ಕ್‌ಗಳನ್ನು ಪಿ.ಎಂ.ಹೈ ಸ್ಕೂಲ್, ಅಂಕೋಲಾಕ್ಕೂ ನೀಡಲಾಗಿದೆ.

## 10.2012–2013ನೇ ಸಾಲಿನಲ್ಲಿ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ ಇತ್ಯಾದಿಗಳ ವಿವರ

| ಅ. ನಂ. | ಶಾಲೆ/ಕಾಲೇಜಿನ ಹೆಸರು | ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ | ಟ್ರಸ್ಟಿನಿಂದ ನೀಡಿದ ಮೆಂಟೆನನ್ಸ ಹಣ | ಕಟ್ಟಡ ನಿರ್ಮಾಣ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ |
|---|---|---|---|---|
| | **DEGREE COLLEGES** | | | |
| 1 | Gokhale Centenary College, Ankola | Rs.9,63,151 | - | - |
| 2 | Divekar College of Commerce, Karwar | Rs.6,18,677 | - | - |
| 3 | KWT's College of Education, Dandeli | Rs.8,13,550 | - | Rs.3,13,010 |
| 4 | B.C.A. College, Karwar | Rs.4,94,360 | - | - |
| | **JUNIOR COLLEGES** | | | |
| 5 | Gokhale Centenary PU College, Ankola | Rs.8,26,066 | - | - |
| 6 | Divekar P.U. Com. College, Karwar | Rs.4,33,887 | - | - |
| 7 | J.V.Comp. Jr. College, Dandeli | Rs.1,59,720 | - | Rs.9,48,970 |
| 8 | J.V.Comp. Jr. College, Kadtoka | Rs.78,000 | Rs.7,500 | Rs.2,85,000 |
| 9 | J.V.Comp. Jr. College, Shirali, Bhatkal | Rs.6,65,900 | Rs.7,500 | Rs.1,45,515 |
| 10 | P.M. Comp. Junior College, Ankola | Rs.2,52,400 | - | - |
| 11 | Divekar P.U. Science College, Karwar | Rs.7,44,267 | - | - |
| | **HIGH SCHOOLS** | | | |
| 12 | P.M. High School, Ankola | Rs.2,35,100 | Rs.7,500 | Rs.7,20,443 |
| 13 | Janata Vidyalaya, Baad-Kagal, Kumta | Rs.76,800 | Rs.7,500 | Rs.25,953 |
| 14 | Janata Vidyalaya, Shirali, Bhatkal | Rs.69,083 | - | - |
| 15 | Janata Vidyalaya, Dandeli | Rs.6,80,596 | - | Rs.4,17,266 |
| 16 | Janata Vidyalaya, Kadwad, Karwar | Rs.66,000 | Rs.7,500 | Rs.4,33,900 |

| | | | | |
|---|---|---|---|---|
| 17 | Janata Vidyalaya, Kasarkod, Honnavar | Rs.71,500 | Rs.7,500 | Rs.8,645 |
| 18 | Janata Vidyalaya, Murdeshwar, Bhatkal | Rs.4,20,957 | Rs.7,500 | Rs.1,85,210 |
| 19 | Janata Vidyalaya, Mirjan-Kodkani | Rs.60,000 | Rs.7,500 | Rs.41,613 |
| 20 | Janata Vidyalaya, Kadtoka | Rs.98,000 | - | - |
| 21 | Janata Vidyalaya, Mudga, Karwar | Rs.36,000 | Rs.7,500 | - |
| 22 | Janata Vidyalaya, Dhareshwar, Kumta | Rs.12,000 | Rs.7,500 | Rs.4,00,000 |
| 23 | Janata Vidyalaya, Bedkani, Siddapur | Rs.76,000 | Rs.7,500 | - |
| 24 | S.K.P. High School, Katgal, Kumta | Rs.1,12,600 | Rs.7,500 | Rs.36,80,000 |
| 25 | Janata Vidyalaya, Anilgod, Honnavar | Rs.13,200 | Rs.7,500 | Rs.14,423 |
| 26 | Janata Vidyalaya, Kulve-Baroor, Sirsi | Rs.53,000 | Rs.7,500 | Rs.6,35,000 |
| 27 | P.M.Eng. Medium High School,Ankola | Rs.3,16,005 | - | Rs.1,21,299 |
| | **PRIMARY AND PRE-PRIMARY SCHOOLS** | | | |
| 28 | English & Kannada Medium School, Dandeli | Rs.21,90,101 | - | Rs.1,45,536 |
| 29 | Balamandir & Tailoring School, Mundgod | Rs.20,000 | - | Rs.15,000 |
| 30 | Dr. Dinkar Desai School, Ankola | Rs.9,90,292 | - | Rs.1,86,337 |
| 31 | Dinkar Pre-Primary/Primary School, Dhareshwar | Rs.4,44,675 | - | - |
| 32 | Balamandir, Shirali | Rs.1,40,960 | - | Rs.4,34,380 |
| | **OTHER SOCIAL SERVICE INSTITUTIONS** | | | |
| 33 | Thakkar Bapa Tailoring School, Ankola | Rs.12,000 | - | - |
| 34 | Trust Office Staff & Music Schools - Ankola & Karwar + computer, furniture, Staff & Chairman Quarters Repairs & other misc. works | Rs.4,20,150 | - | Rs.1,06,500 |
| 35 | Divekar College – Computer Section | Rs.3,54,832 | - | - |
| | **Total** | **Rs.1,30,07,829** | **Rs.1,05,000** | **Rs.92,64,000** |

## ತಾತ್ಕಾಲಿಕವಾಗಿ ಸೇವೆ ಸಲ್ಲಿಸುವವರ ಭವಿಷ್ಯ ನಿಧಿ


2012–13ನೇ ಸಾಲಿನಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಾಲಾ ಕಾಲೇಜುಗಳ, ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನ ರಹಿತ ಸಿಬ್ಬಂದಿಗಳಿಗೆ ಸರ್ಕಾರದ ನಿಯಮದಂತೆ ಶೇಕಡಾ 12% ರಂತೆ ಭವಿಷ್ಯ ನಿಧಿಯನ್ನು ತುಂಬಿದ ವಿವರ ಈ ಕೆಳಗಿನಂತೆ ಇದೆ.

| | | |
|---|---|---|
| 1 | ಸಿಬ್ಬಂದಿಗಳ ಭವಿಷ್ಯ ನಿಧಿ ವಂತಿಗೆ ರೂ. | Rs.6,27,294 |
| 2 | ಟ್ರಸ್ಟಿನಿಂದ ಪಾವತಿಸಿದ ಭವಿಷ್ಯ ನಿಧಿ ವಂತಿಗೆ<br>*(ಸರ್ವಿಸ್ ಹಾಗೂ ಇನ್ನಿತರ ವಂತಿಗೆ ಸಹಿತ)* | Rs.7,07,850 |
| | ಒಟ್ಟು | **Rs.13,35,144** |

2012–2013ನೇ ಸಾಲಿನಲ್ಲಿ (1) ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ (2) ಶಾಲಾ–ಕಾಲೇಜುಗಳ ನಿರ್ವಹಣಾ ವೆಚ್ಚಕ್ಕಾಗಿ ನೀಡಿದ ಹಣ (3) ಭವಿಷ್ಯನಿದಿಗೆ ಆಡಳಿತ ಮಂಡಳಿ ಸಂದಾಯ ಮಾಡಿದ ವಂತಿಗೆ (4) ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದ ವೆಚ್ಚ (5) ಕ್ರೂಗರ ಫೌಂಢೇಶನ್‌ನಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ Ex-gratia ಹಣದ ವಿವರ ಈ ಕೆಳಗಿನಂತಿದೆ.

## ABSTRACT

| | | |
|---|---|---|
| I | ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ | Rs. 1,30,07,829 |
| II | ಶಾಲಾ–ಕಾಲೇಜುಗಳ ನಿರ್ವಹಣಾ ವೆಚ್ಚಕ್ಕಾಗಿ ನೀಡಿದ ಹಣ | Rs. 1,05,000 |
| III | ಭವಿಷ್ಯನಿದಿಗೆ ಆಡಳಿತ ಮಂಡಳಿ ಸಂದಾಯ ಮಾಡಿದ ವಂತಿಗೆ | Rs. 7,07,850 |
| IV | ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದ ವೆಚ್ಚ | Rs. 92,64,000 |
| V | ಕ್ರೂಗರ ಫೌಂಢೇಶನ್‌ನಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ Ex-gratia ಹಣ | Rs. 4,40,000 |
| | ಒಟ್ಟೂ | Rs.2,35,24,679 |




2012–2013ನೇ ಸಾಲಿನಲ್ಲಿ ಅನುದಾನ ರಹಿತ ಸಿಬ್ಬಂದಿ ವೇತನಕ್ಕಗಿ, ಅಭಿವೃದ್ಧಿ ಕಾರ್ಯಗಳಿಗಾಗಿ, ಭವಿಷ್ಯ ನಿಧಿ ವಂತಿಗೆಗಾಗಿ ಹಾಗೂ ಇನ್ನಿತರ ಕಾರ್ಯಕ್ಕಾಗಿ ಒಟ್ಟು **ರೂ.2,35,24,679/– (ರೂಪಾಯಿ ಎರಡು ಕೋಟಿ ಮೊವತ್ತೈದು ಲಕ್ಷ ಇಪ್ಪತ್ನಾಲ್ಕು ಸಾವಿರದ ಆರು ನೂರಾ ಎಪ್ಪತ್ತೊಂಬತ್ತು)** ಖರ್ಚು ಮಾಡಲಾಗಿದೆ. ಈ ಎಲ್ಲ ಕಾರ್ಯಕ್ಕೆ ಮಾಡಿದ ವೆಚ್ಚವನ್ನು ಟ್ರಸ್ಟು ನಡೆಸುತ್ತಿರುವ ವಿವಿಧ ಕೇಂದ್ರಗಳಲ್ಲಿ ಆಡಳಿತ ಮಂಡಳಿ ಖಾತೆಗೆ ಸಂಗ್ರಹಿಸಿದ ಹಣದಿಂದ, ದಾನಿಗಳಿಂದ ಸಂಗ್ರಹಿಸಿದ ಹಣದಿಂದ, ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ, ಶಾಸಕರ ಹಾಗೂ ಲೋಕ ಸಭಾ ಸದಸ್ಯರ ಅಭಿವೃದ್ಧಿ ನಿಧಿಯಿಂದ ಬಂದ ಹಣದಿಂದ, ಕ್ರೂಗರ್ ಫೌಂಡೆಶನ್ ನೀಡಿದ ಹಣದಿಂದ ಹಾಗೂ ಟ್ರಸ್ಟು ನೀಡಿದ ಹಣದಿಂದ ನಿರ್ವಹಿಸಲಾಗಿದೆ.

ಈ ಹಣ ಸಂಗ್ರಹಿಸುವಲ್ಲಿ, ಇಲಾಖೆಗಳಿಂದ ಅನುದಾನ ಪಡೆಯುವಲ್ಲಿ ನಮ್ಮ ಟ್ರಸ್ಟಿನ ಸಂಸ್ಥೆಯ ಮುಖ್ಯಸ್ಥರು, ವಿಶೇಷ ಶ್ರಮವಹಿಸಿ ಕಾರ್ಯನಿರ್ವಹಿಸಿದ್ದಾರೆ. ಅವರೆಲ್ಲರಿಗೂ ನಾನು ಟ್ರಸ್ಟಿನ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.


2013–2014ನೇ ಸಾಲಿನಲ್ಲಿಯೂ ಕೂಡಾ ಸಂಸ್ಥೆಯ ಎಲ್ಲ ಮುಖ್ಯಸ್ಥರು ಹಾಗೂ ಸಿಬ್ಬಂದಿಗಳು ಹೆಚ್ಚಿನ ಪ್ರಯತ್ನ ಮಾಡಿ ವಿಶೇಷ ನಿಧಿಯನ್ನು ಸಂಗ್ರಹಿಸಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಂಡು, ಟ್ರಸ್ಟು ಒಂದು ಮಾದರಿ ಸಂಸ್ಥೆಯಾಗಿ ರಾಜ್ಯದಲ್ಲಿ ಹೆಸರುಗಳಿಸುವಂತೆ ಕಾರ್ಯ ನಿರ್ವಹಿಸಲಿ ಎಂದು ಆಶಿಸುತ್ತೇನೆ.

## 11.ಕ್ರುಗರ ಫೌಂಡೇಶನ, ಕಾರವಾರ, ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಸಹಾಯಧನ

ಟ್ರಸ್ಟು ನಡೆಸುತ್ತಿರುವ ಎಲ್ಲ ಶಾಲೆಗಳಲ್ಲಿಯೂ ಶಿಕ್ಷಕರ ಕೊರತೆ ಇದೆ. ಈ ಕೊರತೆ ನೀಗಿಸಲು ಆಡಳಿತ ಮಂಡಳಿಯವರು ಪ್ರತಿ ವರ್ಷ ಅನೇಕ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಶಾಲೆಗಳ ಶೈಕ್ಷಣಿಕ ಮಟ್ಟ ಕುಸಿಯದಂತೆ ನೋಡಿಕೊಂಡು ಅವರಿಗೆ ಸಂಭಾವನೆ ನೀಡುತ್ತ ಬಂದಿದೆ. ಅವರಿಗೆ ನೀಡುತ್ತಿರುವ ಸಂಭಾವನೆ ಮೊತ್ತ ಕಡಿಮೆ ಇರುವದನ್ನು ಮನಗಂಡು ಟ್ರಸ್ಟಿನ ಅಧ್ಯಕ್ಷರು 2006–2007ನೇ ಸಾಲಿನಿಂದ ಎಲ್ಲ ತಾತ್ಕಾಲಿಕ ಶಿಕ್ಷಕರಿಗೆ ಪ್ರತಿ ತಿಂಗಳು ರೂ.500/– ರಂತೆ ಕ್ರುಗರ್ ಫೌಂಡೇಶನ್ ವತಿಯಿಂದ ಸಹಾಯಧನವಾಗಿ ನೀಡುತ್ತ ಬಂದಿದ್ದಾರೆ. 2010–2011ನೇ ಸಾಲಿನಲ್ಲಿ ಈ ಸಂಭಾವನೆಯನ್ನು ರೂ.1000 ಕ್ಕೆ ಹೆಚ್ಚಿಸಿರುವರು. ಈ ಸಂಭಾವನೆ ಪಡೆಯುವ ಎಲ್ಲ ಶಿಕ್ಷಕರು ಶಾಲೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಿ ಅವರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವದು ಇದರ ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ತಾತ್ಕಾಲಿಕ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕ್ರುಗರ ಪೌಂಡೇಶನನಿಂದ ಇದುವರೆಗೆ ಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಿದ ಸಹಾಯಧನದ ವಿವರ ಈ ಕೆಳಗಿನಂತೆ ಇದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ಕ್ರುಗರ ಫೌಂಡೇಶನ ನೀಡಿದ ಸಹಾಯ ಧನ | ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಒಟ್ಟು ಸಂಭಾವನೆ |
|---|---|---|---|
| 2006-2007 | 86 | Rs. 3,00,000 | Rs. 2,64,500 |
| 2007-2008 | 88 | Rs. 3,50,000 | Rs. 3,81,500 |
| 2008-2009 | 90 | Rs. 4,00,000 | Rs. 3,84,000 |
| 2009-2010 | 79 | Rs. 3,50,000 | Rs. 3,39,500 |
| 2010-2011 | 78 | Rs. 5,00,000 | Rs. 5,33,500 |
| 2011-2012 | 55 | Rs. 4,59,000 | Rs. 4,13,500 |
| 2012-2013 | 55 | Rs. 4,50,000 | Rs. 4,40,000 |
| **Total** | **531** | **Rs.28,09,000** | **Rs.27,56,500** |



ಈ ಯೋಜನೆಗೆ ಇದುವರೆಗೆ ಕ್ರುಗರ್ ಫೌಂಡೇಶನ್, ಕಾರವಾರ ರೂ.28,09,000 ಸಹಾಯಧನ ನೀಡಿ ಪ್ರೋತ್ಸಾಹನೆ ನೀಡಿದೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರಿಗೂ ಕ್ರುಗರ್ ಫೌಂಡೆಶನ್ ಕಾರವಾರ ಇವರಿಗೂ ಟ್ರಸ್ಟಿನ ಪರವಾಗಿ ಹಾಗೂ ಎಲ್ಲ ಸಂಸ್ಥೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.

2013–2014ನೇ ಶೈಕ್ಷಣಿಕ ವರ್ಷದಲ್ಲಿಯೂ ಈ ಯೋಜನೆ ಮುಂದೆವರೆಸಬೇಕಾಗಿ ಮಾನ್ಯ ಅಧ್ಯಕ್ಷರಿಗೆ ತಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

## 12.‘ಜನರಲ್ ವೆಲ್‌ಫೆರ್ ಫಂಡ್’ ನಿಂದ ನೀಡಿದ ಸಹಾಯಧನ

2012–2013ನೇ ಸಾಲಿನಲ್ಲಿ ಕೆನರಾ ವೆಲ್‌ಫೆರ್ ಟ್ರಸ್ಟು “General Welfare Fund” ಎಂಬ ಹೊಸ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಫಂಡಿಗಾಗಿ ಟ್ರಸ್ಟಿನ ನಿಧಿಯಿಂದ 2012–2013 ರಲ್ಲಿ ರೂ. ಒಂದು ಲಕ್ಷ ವರ್ಗಾಯಿಸಲಾಗಿದೆ. ಈ ನಿಧಿಯಿಂದ ಅಸಹಾಯಕರಿಗೆ, ಆರ್ಥಿಕವಾಗಿ ತೀರಾ ಬಡವರಿದ್ದು ವೈದ್ಯಕೀಯ ಖರ್ಚು ನಿರ್ವಹಿಸಲು ಸಾಧ್ಯವಾಗದವರಿಗೆ ಸಹಾಯವನ್ನು ನೀಡಲು ಟ್ರಸ್ಟು ಬಯಸಿದೆ. ಈ ಕುರಿತು ದಿನಾಂಕ 12–10–2012 ರಂದು ಜರುಗಿದ ಟ್ರಸ್ಟಿನ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ.

ಈ ವರ್ಷ ಈ ನಿಧಿಯಿಂದ ಸಹಾಯ ಪಡೆದ ಫಲಾನುಭವಿಗಳು.

| | | |
|---|---|---|
| 1 | ಶ್ರೀ ವಿಠೋಬ ಲಕ್ಷ್ಮಣ ಶೆಟ್ಟಿ, ಬಡಗೇರಿ, ಅಂಕೋಲಾ<br>(ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಅವರ ಔಷದೋಪಚಾರದ ಬಗ್ಗೆ) | ರೂ.15,000 |
| 2 | ಶ್ರೀ ನಾಗರಾಜ ನೀಲಕಂಠ ದೇಸಾಯಿ, ದಾಂಡೇಲಿ<br>(ಇ.ಎಂ.ಎಸ್. ದಾಂಡೇಲಿ ಶಾಲೆಯ ವಿದ್ಯಾರ್ಥಿಗೆ ವೈದ್ಯಕೀಯ ವೆಚ್ಚಕ್ಕಾಗಿ) | ರೂ.10,000 |
| 3 | ಶ್ರೀ ಜಟ್ಟಯ್ಯಾ ಮಾಸ್ತಿ ಮುಕ್ರಿ, ಕಡತೋಕಾ<br>(ಹೃದಯ ಕಾಯಿಲೆ ಚಿಕಿತ್ಸೆಗಾಗಿ) | ರೂ.5,000 |
| 4 | ಶ್ರೀ ಜಯರಾಮ ಸುಬ್ಬಯ್ಯ ಶೆರ್ವೆ, ಹೊಸಗದ್ದೆ, ಅಂಕೋಲಾ<br>(ವಿದ್ಯಾರ್ಥಿ – ಔಷದೋಪಚಾರದ ಸಲುವಾಗಿ) | ರೂ.5,000 |
| 5 | ಶ್ರೀಮತಿ ನೇತ್ರಾವತಿ ಬಿ.ಮಡಿವಾಳ, ಮುರ್ಡೇಶ್ವರ<br>(ಔಷದೋಪಚಾರದ ಸಲುವಾಗಿ) | ರೂ.5,000 |
| | **ಒಟ್ಟು** | **ರೂ.40,000** |

‘ಜನರಲ್ ವೆಲ್‌ಪೇರ್ ಫಂಡ್’ ನಿಧಿಗಾಗಿ ದಾನಿಗಳು ಹಣ ನೀಡಿದರೆ ಆ ಹಣವನ್ನು ಈ ಖಾತೆಗೆ ಟ್ರಸ್ಟಿನಲ್ಲಿ ಜಮಾ ಮಾಡಲಾಗುವದು. ಸಂಸ್ಥೆಯ ಮುಖ್ಯಸ್ಥರು ಈ ಯೋಜನೆಗಾಗಿ ಹಣ ಸಂಗ್ರಹಿಸಿದರೆ ನೇರವಾಗಿ ಟ್ರಸ್ಟಿಗೆ ಸಂದಾಯ ಮಾಡಬೇಕು. ಅವರಿಗೆ ಟ್ರಸ್ಟಿನಿಂದ ರಸಿದಿ ನೀಡಲಾಗುವದು. ಈ ದೇಣಿಗೆಗೆ Income Tax benefit under Sec. 80G ಸೌಲಭ್ಯ ಕೂಡಾ ಇದೆ.

## 13.ಶಿಕ್ಷಣಕ್ಕಾಗಿ ಆರ್ಥಿಕ ನೆರವು –2012–2013ನೇ ಸಾಲಿನಲ್ಲಿ ಪ್ರಾರಂಭಿಸಿದ ಹೊಸ ಯೋಜನೆ


ಆರ್ಥಿಕ ಕಾರಣಗಳಿಂದ ಬಡ ಹಾಗೂ ಅರ್ಹ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದೆಂಬ ಕಾರಣದಿಂದ "ಶಿಕ್ಷಣಕ್ಕಾಗಿ ಆರ್ಥಿಕ ನೆರವು" ಎಂಬ ಯೋಜನೆ 2012–2013ನೇ ಸಾಲಿನಿಂದ ಪ್ರಾರಂಭಿಗೊಂಡಿದೆ.

**FINANCIAL ASSISTANCE FOR EDUCATION**



ಈ ಯೋಜನೆಯ ಪ್ರಾಯೋಜಕತ್ವವನ್ನು ಕ್ರುಗರ್ ಫೌಂಡೇಶನ್, ಕಾರವಾರ ಹಾಗೂ ಉಚ್ಚನ್ಯಾಯಾಲಯದ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ವಹಿಸಿಕೊಂಡಿದ್ದಾರೆ. ಈ ಮಹತ್ವದ ಯೋಜನೆಯನ್ನು ಟ್ರಸ್ಟು ಕಾರ್ಯಗತಗೊಳಿಸುತ್ತದೆ.

2012–2013ರಲ್ಲಿ ಪ್ರಾರಂಭಿಸಿದ ಈ ಯೋಜನೆಯ ಲಾಭವನ್ನು ಪಡೆಯಲು ಜಿಲ್ಲೆಯ 1300ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಟ್ರಸ್ಟಿಗೆ ಅರ್ಜಿಯನ್ನು ಸಲ್ಲಿಸಿದರು. ಟ್ರಸ್ಟು ನೇಮಕ ಮಾಡಿದ ಅರ್ಜಿಗಳ ಪರಿಶೀಲನಾ ಸಮಿತಿ ಹಲವಾರು ಸಲ ಸಭೆ ಸೇರಿ ಅರ್ಜಿಗಳನ್ನು ಪರಿಶಿಲಿಸಿ, 300 ಬಡ ಹಾಗೂ ಅರ್ಹ ವಿದ್ಯಾರ್ಥಿಗಳ ಅರ್ಜಿಯನ್ನು ಪರಿಗಣಿಸಿ, ಯಾದಿ ತಯಾರಿಸಿ, ಪ್ರಾಯೋಜಕರ ಮಂಜೂರಿಗಾಗಿ ಶಿಫಾರಸು ಮಾಡಿದ ಪ್ರಕಾರ, ಆ ಯಾದಿಗೆ ಪ್ರಾಯೋಜಕರು ಮಂಜೂರಿ ನೀಡಿ 300 ವಿದ್ಯಾರ್ಥಿಗಳಿಗೆ ತಲಾ ರೂ.3000/– ರಂತೆ ವಿದ್ಯಾರ್ಥಿ ವೇತನ ಮಂಜೂರ ಮಾಡಿದ್ದು ಇರುತ್ತದೆ. ಆಯ್ಕೆಯಾದ 300 ವಿದ್ಯಾರ್ಥಿಗಳಲ್ಲಿ 185 ವಿದ್ಯಾರ್ಥಿನಿಯರು ಹಾಗೂ 115 ವಿದ್ಯಾರ್ಥಿಗಳು ಇರುತ್ತಾರೆ. ಅವರ ವಿವರ ಈ ಕೆಳಗೆ ನೀಡಿದ ಗ್ರಾಫ್‌ನಲ್ಲಿ ಕಾಣಬಹುದು.





ಆಯ್ಕೆಯಾದ 300 ವಿದ್ಯಾರ್ಥಿಗಳಿಗೆ ಆಹ್ವಾನಿಸಿ 08–09–2012 ರಂದು ಅಂಕೋಲೆಯ ಗೋಖಲೆ ಸೆಂಟಿನರಿ ಕಾಲೇಜಿನ ಯು.ಜಿ.ಸಿ. ಸಭಾಭವನದಲ್ಲಿ ನಡೆದ ಸರಳ ಹಾಗೂ ಸುಂದರ ಸಮಾರಂಭದಲ್ಲಿ ಈ ಯೋಜನೆಯ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರು 300 ವಿದ್ಯಾರ್ಥಿಗಳಿಗೆ ತಲಾ ರೂ.3000/–ದಂತೆ ಒಟ್ಟು 9 ಲಕ್ಷ ರೂಪಾಯಿ ಬ್ಯಾಂಕ್ ಡಿ.ಡಿ. ನೀಡುವ ಮೂಲಕ ವಿತರಿಸಿದರು.



2013–2014ನೇ ಸಾಲಿಗೆ ಈ ಯೋಜನೆಯನ್ನು ಪ್ರಾಯೋಜಕರು ಮುಂದುವರೆಸಿದ್ದು, ಅರ್ಜಿಗಳನ್ನು ಅರ್ಹ ವಿದ್ಯಾರ್ಥಿಗಳಿಂದ ಪಡೆಯುವ ಕಾರ್ಯ ಪ್ರಾರಂಭವಾಗಿದೆ. 2012–2013ನೇ ವರ್ಷದಲ್ಲಿ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳು ಪರಿಕ್ಷೇಯಲ್ಲಿ ಉತ್ತಮ ಸಾಧನೆ ಮಾಡಿದರೆ ಅವರಿಗೆ ವಿದ್ಯಾರ್ಥಿ ವೇತನ ಮುಂದುವರೆಸಲಾಗುವದೆಂದು ಪ್ರಾಯೋಜಕರು ತಿಳಿಸಿರುತ್ತಾರೆ.



ಈ ಯೋಜನೆಯ ಪ್ರಾಯೋಜಕರಿಗೂ ಹಾಗೂ ಎಲ್ಲ ಸಂಘಟಕರಿಗೂ ಹೃತ್ಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

## 14. Mobile Health Care Project – ಆರೋಗ್ಯ ತಪಾಸಣೆ ಮತ್ತು ಔಷದೋಪಚಾರ ಶಿಬಿರ



2013ನೇ ಸಾಲಿನಿಂದ ಜಿಲ್ಲೆಯ ವಿವಿಧ ಗ್ರಾಮೀಣ ಭಾಗದಲ್ಲಿ ನುರಿತ ತಜ್ಞ ವೈದ್ಯರಿಂದ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಿ ಅರ್ಹ ಫಲಾನುಭವಿಗಳಿಗೆ ಉಚಿತ ಔಷದವನ್ನು ನೀಡುವ ಹೊಸ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯ ಪೂರ್ಣ ವೆಚ್ಚವನ್ನು ಕ್ರುಗರ್ ಫೌಂಡೇಶನ್, ಕಾರವಾರ ಹಾಗೂ ಸುಪ್ರೀಮ್ ಕೋರ್ಟಿನ ಯುವ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ಪ್ರಾಯೋಜಕರಾಗಿ ಭರಿಸಲು ಒಪ್ಪಿಕೊಂಡಿರುತ್ತಾರೆ.

ಈ ಯೋಜನೆಯ ಮೊದಲನೇಯ ಶಿಬಿರವನ್ನು ದಿನಾಂಕ 16–06–2013 ರಂದು ಅಂಕೋಲಾ ತಾಲೂಕಿನ ಬಾಸಗೋಡ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿತ್ತು.

ಈ ಶಿಬಿರದ ಪ್ರಯೋಜನ ಪಡೆಯಲು ವಿವಿಧ ಹಳ್ಳಿಗಳಿಂದ ಒಟ್ಟು 272 ರೋಗಿಗಳು ಆಗಮಿಸಿದ್ದರು. ಶಿಬಿರಕ್ಕೆ ಆಗಮಿಸಿದ ಎಲ್ಲ ರೋಗಿಗಳನ್ನು ತಜ್ಞ ವೈದ್ಯರುಗಳು ತಪಾಸಣೆ ನಡೆಸಿದರು. ಈ ತಪಾಸಣಾ ಶಿಬಿರದಲ್ಲಿ

(1) **ಡಾ. ಹೇಮಂತ ಕಾಮತ,** *ಹೃದಯ ರೋಗ ತಜ್ಞರು,* ಶಿರಾಲಿ
(2) **ಡಾ. ಸತೀಶ ವಿ.ಪ್ರಭು,** *ಮಕ್ಕಳ ತಜ್ಞರು,* ಕುಮಟಾ
(3) **ಡಾ. ಜಿ.ಜಿ.ಹೆಗಡೆ,** *ಸ್ತ್ರೀ ರೋಗ ತಜ್ಞರು,* ಕುಮಟಾ
(4) **ಡಾ. ರವಿ ಎಂ.ಜಿ.,** *ದಂತ ತಜ್ಞರು,* ಧಾರವಾಡ
(5) **ಡಾ. ಎಂ.ಎಲ್.ಫರ್ನಾಂಡಿಸ್,** *ಸಾಮಾನ್ಯ ರೋಗ ತಜ್ಞರು,* ಅಂಕೋಲಾ

ಇವರು ಭಾಗವಹಿಸಿದ್ದರು.



ಅಂಕೋಲಾದ ವಿಶ್ವದರ್ಶನ ನರ್ಸಿಂಗ್ ಕಾಲೇಜಿನಲ್ಲಿ ಅಂತಿಮ ವರ್ಷದ 10 ನರ್ಸ್ ವಿದ್ಯಾರ್ಥಿಗಳು ಭಾಗವಹಿಸಿ ಸಹಾಯ ಸಲ್ಲಿಸಿದ್ದರು. Change Makers Group – II ನೇ ಬ್ಯಾಚಿನ ವಿದ್ಯಾರ್ಥಿಗಳು ಕೂಡಾ ಸ್ವಯಂ ಸೇವಕರಾಗಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದರು. ಈ ಶಿಬಿರದಲ್ಲಿ ಪಾಲ್ಗೊಂಡ ಎಲ್ಲ ರೋಗಿಗಳಿಗೆ ವೈದ್ಯರು ಬರೆದು ಕೊಟ್ಟ ಔಷದಿಗಳನ್ನು ಉಚಿತವಾಗಿ ನೀಡುವ ವ್ಯವಸ್ಥೆ ಮಾಡಲಾಗಿತ್ತು. ಈ ಶಿಬಿರದಲ್ಲಿ ಹೃದಯ ಕಾಯಿಲೆ ಇದ್ದವರಿಗೆ E.C.G. ತೆಗೆಯುವ ವ್ಯವಸ್ಥೆ, ಅವಶ್ಯವಿದ್ದವರಿಗೆ ರಕ್ತ ತಪಾಸಣೆ ಮಾಡುವ ವ್ಯವಸ್ಥೆಯನ್ನು ಕೂಡಾ ಮಾಡಲಾಗಿತ್ತು.





ಈ ಶಿಬಿರದಲ್ಲಿ 4 ವರ್ಷದ ಒಬ್ಬ ಬಾಲಕ ಕುಮಾರ ರಂಜನ ರಮೇಶ ಗೌಡ, ಬೆಳಂಬಾರ ಗ್ರಾಮ, ಇವನನ್ನು ವೈದ್ಯಕೀಯ ತಪಾಸಣೆಗಾಗಿ ಶಿಬಿರಕ್ಕೆ ಕರೆದುಕೊಂಡು ಬಂದಿದ್ದರು. ಅವನ ತಪಾಸಣೆಯ ನಂತರ ಡಾ. ಸತೀಶ ಪ್ರಭುರವರು ಆ ಹುಡುಗನ ಬಗ್ಗೆ ಶಿಬಿರದಲ್ಲಿ ಪಾಲ್ಗೊಂಡ ಸಂಸ್ಥೆಯ ಅಧ್ಯಕ್ಷರು ಪ್ರಾಯೋಜಕರೂ ಆದ ಶ್ರೀ ಎಸ್.ಪಿ.ಕಾಮತರವರಿಗೆ ಹಾಗೂ ಶ್ರೀ ದೇವದತ್ತ ಕಾಮತರವರಿಗೆ ವಿವರಿಸಿದರು. ಕೂಮಾರ ರಂಜನ ಈತನಿಗೆ ಹುಟ್ಟಿದಾಗಿನಿಂದ ಕಿವಿಕೇಳುವದಿಲ್ಲ ಹಾಗೂ ಆ ಕಾರಣದಿಂದಾಗಿ ಮಾತು ಬರುವದಿಲ್ಲ. ಅವನಿಗೆ ವಿಶೇಷವಾದ ಯಂತ್ರವನ್ನು ಕಿವಿಯಲ್ಲಿ ಅಳವಡಿಸಿದರೆ ಕಿವಿ ಕೇಳಿಸಬಹುದು ಹಾಗೂ ಮಾತು ಕೂಡಾ ಬರಬಹುದೆಂದು ತಿಳಿಸಿದರು. ಆದಕ್ಕೆ ಅಧ್ಯಕ್ಷರು ಕೂಡಲೆ ಸಮ್ಮತಿಸಿದರು.

ಅದರ ನಂತರ ಕುಮಾರ ರಂಜನನನ್ನು ENT Surgeon ರಿಗೆ ತೋರಿಸಿ, ದಿನಾಂಕ 07–07–2013 ರಂದು KLE Hospital ಅಂಕೋಲಾದಲ್ಲಿ Hearing Aid Instrumentsನ್ನು ಅಳವಡಿಸಲಾಯಿತು. ಇದಕ್ಕೆ ಒಟ್ಟು ರೂ.17,000/– ವೆಚ್ಚ ಬಂದಿರುತ್ತದೆ. ಈ ಹಣವನ್ನು ಕೂಡಾ ಪ್ರಾಯೋಜಕರೇ ನೀಡಿರುತ್ತಾರೆ.


ಈ ಒಂದು ಆರೋಗ್ಯ ತಪಾಸಣಾ ಶಿಬಿರ ನಡೆಸಲು ಹಾಗೂ ಔಷದಿಗಳನ್ನು ನೀಡಲು ಒಟ್ಟು ರೂ.1,00,662/– ಖರ್ಚಾಗಿದ್ದು. ಈ ಶಿಬಿರದ ಪೂರ್ಣ ವೆಚ್ಚವನ್ನು ಪ್ರಾಯೋಜಕರು ನೀಡಿರುತ್ತಾರೆ.

ನಮ್ಮ ಜಿಲ್ಲೆಯ ವಿವಿಧ ಭಾಗಗಳಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಏರ್ಪಡಿಸಬೇಕೆಂಬುದು ಪ್ರಾಯೋಜಕರ ಆಶಯವಾಗಿದೆ. ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳ ಮುಖ್ಯಸ್ಥರು ಈ ಯೋಜನೆ ತಮ್ಮ ಭಾಗಗಳಲ್ಲಿ ನೆರವೇರಿಸಲು ಮುಂದೆ ಬಂದರೆ ಶಿಬಿರಗಳನ್ನು ನಡೆಸಲಾಗುವದು.

ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲ ವೈದ್ಯರುಗಳಿಗೆ, ನರ್ಸಿಂಗ್ ವಿದ್ಯಾರ್ಥಿನಿಯರಿಗೆ, ಪ್ರಾಯೋಜಕರಾದ ಶ್ರೀ ಎಸ್.ಪಿ.ಕಾಮತ, ಅಧ್ಯಕ್ಷರು, ಕ್ರುಗರ್ ಫೌಂಡೇಶನ್, ಕಾರವಾರ, ಶ್ರೀ ದೇವದತ್ತ ಕಾಮತರಿಗೆ ಹಾಗೂ ಎಲ್ಲ ಸಂಘಟಕರಿಗೆ ಹೃತ್ಪೂರ್ವಕವಾಗಿ ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

## 15.<u>ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ</u>

ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ, ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳ ಕುರಿತು ಜಾಗ್ರತೆ ಮೂಡಿಸಿ ಅದರ ವಿರುದ್ಧ ಹೋರಾಟ ಮಾಡುವ ಶಕ್ತಿ ಬರಬೇಕು. ತಮ್ಮ ನಾಯಕತ್ವವನ್ನು ಬೆಳಿಸಿ ಕೊಳ್ಳುವ ಛಲ ಅವರಲ್ಲಿ ಮೂಡಬೇಕು ಎನ್ನುವ ಉದ್ದೇಶವನ್ನು ಇಟ್ಟುಕೊಂಡು "ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆ"ಯನ್ನು ಸುಪ್ರೀಮ್ ಕೋರ್ಟಿನ ಯುವ ನ್ಯಾಯವಾದಿಗಳಾದ ಶ್ರೀ ದೇವದತ್ತ ಕಾಮತರವರು ತಮ್ಮ ಅಜ್ಜ ದಿ|| ಪಿ.ಎಸ್.ಕಾಮತರವರ ಸ್ಮರ್ಣಾರ್ಥ 2011–2012ನೇ ಸಾಲಿನಿಂದ ಪ್ರಾರಂಭಿಸಿದರು. ಈ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆ ಮೂರು ಹಂತದಲ್ಲಿ ನಡೆಸಲಾಗುತ್ತಿದೆ. (1) ಕಾಲೇಜು ಮಟ್ಟದಲ್ಲಿ, (2) ತಾಲೂಕಾ ಮಟ್ಟದಲ್ಲಿ ಮತ್ತು (3) ಜಿಲ್ಲಾ ಮಟ್ಟದಲ್ಲಿ. ಈ ಮೂರು ಹಂತದಲ್ಲಿ ಜಯಶಾಲಿ ಆದವರಿಗೆ ಬಹುಮಾನ ನೀಡಲಾಗುತ್ತಿದೆ. ಜಿಲ್ಲಾ ಮಟ್ಟದ ಅಂತಿಮ ಸ್ಪರ್ಧೆಗಳಲ್ಲಿ ಮೊದಲನೆ ಸ್ಥಾನ ಪಡೆದವರಿಗೆ ರೂ.50,000/–, ದ್ವಿತೀಯ ಸ್ಥಾನ ಪಡೆದವರಿಗೆ ರೂ.30,000/–, ತೃತೀಯ ಸ್ಥಾನ ಪಡೆದವರಿಗೆ ರೂ.20,000/– ಹಾಗೂ 4 ಮತ್ತು 5ನೇ ಸ್ಥಾನ ಪಡೆದವರಿಗೆ ತಲಾ ರೂ.5,000/– ನೀಡಲಾಗುತ್ತಿದೆ. ಇದರ ಹೊರತಾಗಿ ಅಂತಿಮ ಸುತ್ತಿನಲ್ಲಿ ಭಾಗವಹಿಸುವ ಎಲ್ಲ ಸ್ಪರ್ಧಾಳುಗಳಿಗೆ ಆಕರ್ಶಕ ಇತರೇ ಬಹುಮಾನ ನೀಡಲಾಗುತ್ತಿದೆ.



2012–2013 ರಲ್ಲಿ ನಡೆದ P.S.Kamat Memorial District Level Inter-Collegiate Debate Competition ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾದಲ್ಲಿ ಜನವರಿ 8 ಮತ್ತು 9 ರಂದು ನಡೆಯಿತು.

ಚರ್ಚಾ ವಿಷಯ: **Indian Parliamentary Democracy is a Success Story**
**(ಭಾರತದ ಸಂಸದೀಯ ಪ್ರಜಾಪ್ರಭುತ್ವವು ಒಂದು ಯಶೋಗಾಥೆ)**

ಕಾರ್ಯಕ್ರಮದ ಉದ್ಘಾಟನೆಯನ್ನು ಕೆನರಾ ವೆಲ್‌ಫೇರ್ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತ ರವರು ನೆರವೇರಿಸಿದರು. ಪ್ರೊ. ಜಿ.ವಿ.ಭಟ್, ಧರ್ಮದರ್ಶಿಗಳು, ಕೆನರಾ ವೆಲ್‌ಫೇರ್ ಟ್ರಸ್ಟ್ ಅವರು ಅಧ್ಯಕ್ಷತೆ ವಹಿಸಿದ್ದರು. ಬಹುಮಾನ ಗಳಿಸಿದ ವಿದ್ಯಾರ್ಥಿಗಳ ಯಾದಿ ಈ ಕೆಳಗಿನಂತಿದೆ.

| ಬಹುಮಾನ | ಹೆಸರು | ಮೊತ್ತ |
|---|---|---|
| **1ನೇ ಸ್ಥಾನ** | **ಕು. ಪಂಕಜಾ ಎಸ್.ನಾಯಕ**<br>ಗೋಖಲೆ ಸೆಂಟಿನರಿ ಕಾಲೇಜ್, ಅಂಕೋಲಾ | **ರೂ.50,000** |
| **2ನೇ ಸ್ಥಾನ** | **ಕು. ಕೆ.ಕೆ.ಅಪೂರ್ವ**<br>ಆರ್.ಎನ್.ಶೆಟ್ಟಿ ಪದವಿ ಪೂರ್ವ ಕಾಲೇಜ್, ಮುರ್ಡೇಶ್ವರ | **ರೂ.30,000** |
| **3ನೇ ಸ್ಥಾನ** | **ಕು. ಸತೀಶ ಹೆಗಡೆ**<br>ಡಾ. ಎ.ವಿ.ಬಾಳಿಗಾ ವಾಣಿಜ್ಯ ಕಾಲೇಜ್, ಕುಮಟಾ | **ರೂ.20,000** |
| **4ನೇ ಸ್ಥಾನ** | **ಕು. ನಿರ್ಮಲಾ ಎನ್.ಭಟ್**<br>ಸರಕಾರಿ ಪ್ರಥಮ ದರ್ಜೆ ಕಾಲೇಜ್, ಯಲ್ಲಾಪುರ | **ರೂ.5,000** |
| **5ನೇ ಸ್ಥಾನ** | **ಕು. ಪರಾಶರ ಆರ್.ಹೆಗಡೆ**<br>ಎಂ.ಇ.ಎಸ್. ಪದವಿ ಪೂರ್ವ ಕಾಲೇಜ್, ಶಿರಸಿ | **ರೂ.5,000** |

ನಗದು ಬಹುಮಾನದ ಹೊರತಾಗಿ ಅಂತಿಮ ಸುತ್ತಿನಲ್ಲಿ ಭಾಗವಹಿಸಿದ ಎಲ್ಲ ಸ್ಪರ್ಧಾಳುಗಳಿಗೆ Electronic Automation Pvt. Ltd., Bangalore ಅವರ ವತಿಯಿಂದ BSNL Penta Tablet Computer ನೀಡಲಾಯಿತು.



ಈ ಕಾರ್ಯಕ್ರಮಕ್ಕೆ ತಗಲಿದ ಒಟ್ಟು ವೆಚ್ಚ ರೂ.5,12,492/–.

2013–2014ನೇ ಸಾಲಿನ 3ನೇ ವರ್ಷದ ಜಿಲ್ಲಾ ಮಟ್ಟದ ಅಂತರ ಕಾಲೇಜು ಚರ್ಚಾ ಸ್ಪರ್ಧೆಯು ಡಿಸೆಂಬರ್/ಜನವರಿ ತಿಂಗಳಲ್ಲಿ ನಡೆಸುವಂತೆ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರು ತಿಳಿಸಿರುತ್ತಾರೆ.

ಈ ಕಾರ್ಯಕ್ರಮದ ಪ್ರಾಯೋಜಕರಾದ ಶ್ರೀ ದೇವದತ್ತ ಕಾಮತರವರಿಗೆ ಹಾಗೂ ಸಾಂಘಟಕರಿಗೆಲ್ಲರಿಗೂ ನಾನು ಟ್ರಸ್ಟಿನ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

## 16. Project Change Makers for a Better Tomorrow (ಉತ್ತಮ ನಾಳೆಗಾಗಿ ಪರಿವರ್ತನಾಗಾರರು)








ಉತ್ತಮ ನಾಳೆಗಾಗಿ ಪರಿವರ್ತನಾಗಾರರು ಎಂಬ ಸಂಕಲ್ಪದ ಅಡಿಯಲ್ಲಿ ಕಾರವಾರದ ಕ್ರುಗರ ಫೌಂಡೇಶನ ಸಂಸ್ಥೆಯು ಕೆನರಾ ವೆಲ್ ಫೆರ್ ಟ್ರಸ್ಟಿನ ಮೂಲಕ ಕೈಗೆತ್ತಿಕೊಂಡ "Project Change Makers for a Better Tomorrow" ಎಂಬ ಒಂದು ವಿನೂತನವಾದ ಯೋಜನೆಯ ಮೊದಲ ಹಂತದ ತರಬೇತಿ ಶಿಬಿರವನ್ನು ಜನವರಿ 2008ರಲ್ಲಿ ಪ್ರಾರಂಭವಾಗಿ ಎಪ್ರೀಲ 2010ರಂದು ಯಶಸ್ವಿಯಾಗಿ ಮುಕ್ತಾಯಗೊಳಿಸಿದೆ. 3 ವರ್ಷದ ಕಾಲಾವಧಿಯ ಈ ಯೋಜನೆಯನ್ನು ರೂಪಿಸಿ ಮಕ್ಕಳಿಗೆ ತರಬೇತು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರಥಮ ಹಂತದ ಈ ಯೋಜನೆಯ ಲಾಭ ಉತ್ತರ ಕನ್ನಡ ಜಿಲ್ಲೆಯ 125 ಮಕ್ಕಳು ಪಡೆದಿರುತ್ತಾರೆ. ಪ್ರಥಮ ಹಂತದ ಈ ಯೋಜನೆಗೆ ತಗಲಿದ ಒಟ್ಟೂ ವೆಚ್ಚ ರೂ.20,25,000/–.



Project Change Makers for a Better Tomorrow – ಎರಡನೇ ಹಂತದ 3 ವರ್ಷದ ಕಾಲಾವಧಿಯ ಈ ಯೋಜನೆ 15–09–2010 ರಂದು ಪ್ರಾರಭವಾಗಿ ದಿನಾಂಕ 18–07–2013 ರಂದು ಮುಕ್ತಾಯಗೊಂಡಿದೆ. ಈ ಯೋಜನೆಯ ಅಡಿಯಲ್ಲಿ ಜಿಲ್ಲೆಯ 50 ವಿದ್ಯಾರ್ಥಿಗಳು ಆಯ್ಕೆಗೊಂಡು 3 ವರ್ಷದ ಅವಧಿಯಲ್ಲಿ ನಡೆಸಿದ 10 ಶಿಬಿರಗಳಲ್ಲಿ ವಿಶೇಷ ತರಬೇತಿ ಪಡೆದಿರುತ್ತಾರೆ. ಎರಡನೇ ಹಂತದ ಈ ಯೋಜನೆಗೆ ತಗಲಿದ ಒಟ್ಟು ವೆಚ್ಚ ರೂ.12,64,327/–.

ಕಳೆದ 6 ವರ್ಷಗಳ ಅವಧಿಯಲ್ಲಿ, 3 ವರ್ಷ ಅವಧಿಯ ಎರಡು Change Makers ತಂಡದ ತರಬೇತಿ ಶಿಬಿರಗಳು ಮುಕ್ತಾಯವಾಗಿದ್ದು, ಈ ಯೋಜನೆಗೆ ಇದುವರೆಗೆ ಒಟ್ಟು ರೂ.32,89,327/– ಖರ್ಚಾಗಿದ್ದು ಅದರ ಸಂಪೂರ್ಣ ವೆಚ್ಚವನ್ನು ಕ್ರುಗರ್ ಫೌಂಡೇಶನ್, ಕಾರವಾರ, ನೀಡಿದೆ. ಆರು ವರ್ಷದ ಅವಧಿಯಲ್ಲಿ ನಡೆಸಿದ ಎರಡು ತಂಡದ ಶಿಬಿರಗಳಲ್ಲಿ ಅನೇಕ ಸಂಪನ್ಮೂಲ ವ್ಯಕ್ತಿಗಳು ಈ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಲು ತುಂಬಾ ಸಹಕಾರ ನೀಡಿದ್ದಾರೆ. ಈ ಯೋಜನೆಯ ಚೇತನ ಶಕ್ತಿಯಾದ ಶ್ರೀ ಎಸ್.ಪಿ.ಕಾಮತರವರಿಗೂ, ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲು ಸಹಕರಿಸಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಮೂರನೆ ಹಂತದ ಈ ಯೋಜನೆಯ ಪ್ರಾರಂಭಿಕ ಕಾರ್ಯಗಳು ಪ್ರಾರಂಭವಾಗಿದ್ದು, ಅಗಸ್ಟ್ ತಿಂಗಳೊಳಗಾಗಿ ಶಿಬಿರಾರ್ಥಿಗಳು ಆಯ್ಕೆಯಾಗಿ Orientation Retreat ಪ್ರಾರಂಭವಾಗಲಿದೆ.

## 17.ಟ್ರಸ್ಟಿಗೆ ದೇಣಿಗೆ ನೀಡಿದವರ ವಿವರ

1. ಪ್ರೊ. ಜಿ.ವಿ.ಭಟ್ಟ, ಧರ್ಮದರ್ಶಿ, ಕೆನರಾ ವೆಲ್ ಫೆರ್ ಟ್ರಸ್ಟ, ಕಡತೋಕಾ, ಕೊಂಕೇರಿ ಇವರು ರೂ.5 ಲಕ್ಷ ಟ್ರಸ್ಟಿಗೆ ದೇಣಿಗೆಯಾಗಿ ದಿನಾಂಕ 06–07–2012 ರಂದು ನೀಡಿದ್ದಾರೆ. ಅವರು ಈ ಹಣವನ್ನು ಕಡತೋಕಾದಲ್ಲಿ ಶ್ರೀ ವಿಷ್ಣು ಪರಮ ಭಟ್ಟ, ಕೊಂಕೇರಿ ಮೆಮೊರಿಯಲ ಕಂಪ್ಯೂಟರ ಹಾಲ ಕಟ್ಟಿಸಲು ವಿನಿಯೋಗಿಸಬೇಕೆಂದು ತಿಳಿಸಿದ್ದಾರೆ.
2. ಪ್ರೊ. ಶ್ರೀಮತಿ ನಿರ್ಮಲಾ ಬಿ.ನಾಯಕ ಅವರು ತಮ್ಮ ಪತಿ ದಿವಂಗತ ಪ್ರಿ. ಎಸ್.ಎನ್.ನಾಯಕರ ನೆನಪಿಗಾಗಿ ಪಿ.ಎಂ.ಹೈಸ್ಕೂಲಿನಲ್ಲಿ ಕಟ್ಟುತ್ತಿರುವ ಡಾ. ದಿನಕರ ದೇಸಾಯಿ ಜನ್ಮ ಶತಮಾನೋತ್ಸವದ ಕಟ್ಟಡದ 2ನೇ ಅಂತಸ್ತಿನ ನಿರ್ಮಾಣಕ್ಕೆ ವಿನಿಯೋಗಿಸಲು ರೂ.2 ಲಕ್ಷ ದೇಣಿಗೆಯಾಗಿ ದಿ.21–05–2012 ರಂದು ನೀಡಿರುತ್ತಾರೆ.
3. ಚಿತ್ರಾಪುರ ಮಠದ ಶ್ರೀಮದ ಸದ್ಯೋಜಾತ ಶಂಕರಾಶ್ರಮ ಸ್ವಾಮಿಜಿಯವರು ನಮ್ಮ ಸಂಸ್ಥೆಯ ಬಾಲಮಂದಿರ ಕಟ್ಟಡಕ್ಕಾಗಿ ರೂ.2 ಲಕ್ಷ ದೇಣಿಗೆಯನ್ನು ನೀಡಿರುತ್ತಾರೆ.
4. ಸಂಸ್ಕೃತಿ ಸಂಪದ, ಶ್ರೀ ಶೃಂಗೇರಿ ಶಂಕರ ಮಠ, ಸಿದ್ದಾಪುರ, ಇವರು ಶ್ರೀ ದೋಡ್ಮನೆ ಗಣೇಶ ಹೆಗಡೆ ಪುರಸ್ಕಾರ 2012ರ ಅಂಗವಾಗಿ ಟ್ರಸ್ಟಿಗೆ ನೀಡಿದ ಮೊತ್ತ ರೂ.21,000/–.
5. ಶ್ರೀ ದುರ್ಗೇಶ ಎಸ್.ಚಂದಾವರಕರ ಅವರು ಶಿರಾಲಿಯ ಬಾಲಮಂದಿರ ಕಟ್ಟಡಕ್ಕಾಗಿ ರೂ.1 ಲಕ್ಷ 25 ಸಾವಿರ ದೇಣಿಗೆಯಾಗಿ ನೀಡಿರುತ್ತಾರೆ.
6. N.K.G.S.B. ಬ್ಯಾಂಕ ಮುಂಬೈ ಇವರು ಪ್ರತಿವರ್ಷ ಟ್ರಸ್ಟಿಗೆ ರೂ.10,000/– ದೇಣಿಗೆಯಾಗಿ ನೀಡುತ್ತಿದ್ದಾರೆ. ಕಳೆದ ವರ್ಷ ಕೂಡ ಈ ದೇಣಿಗೆಯನ್ನು ನೀಡಿರುತ್ತಾರೆ.
7. Shamdasani Foundation, Hong-Kong ಇವರು ಪ್ರತಿವರ್ಷ ಟ್ರಸ್ಟಿಗೆ ದೇಣಿಗೆ ನೀಡುತ್ತ ಬಂದಿದ್ದು, ಕಳೆದ ವರ್ಷ ರೂ.5000/– ದೇಣಿಗೆಯಾಗಿ ನೀಡಿರುತ್ತಾರೆ.


ಟ್ರಸ್ಟಿಗೆ ದೇಣಿಗೆ ನೀಡಿದ ಈ ಎಲ್ಲ ಮಹನೀಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

## 18.ಟ್ರಸ್ಟಿಗೆ ಬರುವ ಆದಾಯದ ಕುರಿತು

### 1. ತೋಟದ ಉತ್ಪನ್ನ


ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳಲ್ಲಿ ಬರುವ ತೋಟದ ಉತ್ಪನ್ನವನ್ನು ಟ್ರಸ್ಟಿಗೆ ಪಾವತಿಸುವಂತೆ ಈ ಹಿಂದಿನ ವರ್ಷಗಳಲ್ಲಿ ವಿನಂತಿಸಲಾಗಿತ್ತು. ಟ್ರಸ್ಟಿಗೆ ಸಂದಾಯವಾದ ತೋಟದ ಉತ್ಪನ್ನ ಈ ಕೆಳಗಿನಂತಿರುತ್ತದೆ.

| ವರ್ಷ | ಸಂದಾಯವಾದ ಹಣ |
|---|---|
| 2009-2010 | Rs.85,750 |
| 2010-2011 | Rs.1,10,283 |
| 2011-2012 | Rs.1,53,310 |
| 2012-2013 | Rs.1,37,219 |




### 2. ವಸತಿ ಗೃಹದ ಬಾಡಿಗೆ / ಅಂಗಡಿ ಬಾಡಿಗೆ / ಹೊನ್ನೇಕೇರಿ ಹಾಸ್ಟೆಲ್ ಬಾಡಿಗೆ

| ವರ್ಷ | ಸಂದಾಯವಾದ ಬಾಡಿಗೆ ಮೊತ್ತ |
|---|---|
| 2007-2008 | Rs.2,10,397 |
| 2008-2009 | Rs.2,50,034 |
| 2009-2010 | Rs.2,87,788 |
| 2010-2011 | Rs.3,19,896 |
| 2011-2012 | Rs.3,51,172 |
| 2012-2013 | Rs.3,83,227 |





ಜನತಾ ವಿದ್ಯಾಲಯ, ಮುರ್ಡೇಶ್ವರ ಶಾಲೆಯ ಆವಾರದಲ್ಲಿರುವ ಮೂರು ವಸತಿ ಗ್ರಹಗಳನ್ನು ಕಳೆದ ವರ್ಷ ಟ್ರಸ್ಟಿನ ವತಿಯಿಂದ ಪೂರ್ಣ ರಿಪೇರಿ ಮಾಡಿಸಲಾಗಿದೆ. Electric fittings ಹಾಗೂ ನೀರಿನ ವ್ಯವಸ್ಥೆ ಆಗಬೇಕಾಗಿದೆ. ಈ ವಸತಿ ಗ್ರಹಗಳಲ್ಲಿ ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕರು ಉಳಿದುಕೊಳ್ಳಬೇಕು. ಈ ಬಗ್ಗೆ ಮುಖ್ಯಾಧ್ಯಾಪಕರು ಕೂಡಲೆ ಉಳಿಯುವ ವ್ಯವಸ್ಥೆ ಮಾಡಿಸಿ ಟ್ರಸ್ಟಿಗೆ ವರದಿ ನೀಡಬೇಕು. ಶಾಲಾ / ಕಾಲೇಜು ಆವಾರದಲ್ಲಿರುವ ಟ್ರಸ್ಟಿನ ಎಲ್ಲ ಕಟ್ಟಡಗಳ ನಿರ್ವಹಣೆ ಹಾಗೂ ಪಂಚಾಯತ / ನಗರ ಸಭೆ ಕರ ತುಂಬುವದು ಟ್ರಸ್ಟಿನಿಂದಲೆ ಮಾಡಲಾಗುತ್ತಿದೆ.

## 3. ರೂಪೀ ರಿಸರ್ವ ಫಂಡ

ಶಾಲಾ ಕಾಲೇಜಿಗೆ ದಾಖಲಾದ ವಿದ್ಯಾರ್ಥಿಗಳಿಂದ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಯವರಿಂದ ಒಂದು ಶೈಕ್ಷಣಿಕ ವರ್ಷಕ್ಕೆ ರೂ.100/–ನ್ನು ರೂಪೀ ರಿಸರ್ವ ಫಂಡ ಆಗಿ ಸಂಗ್ರಹಿಸಿ, ಟ್ರಸ್ಟಿಗೆ ಜಮಾ ಮಾಡುವದು ಟ್ರಸ್ಟಿನ ಯೋಜನೆಯಲ್ಲೊಂದು.

| ವರ್ಷ | ರೂಪೀ ರಿಸರ್ವ ಫಂಡ ಸಂಗ್ರಹಣೆ |
|---|---:|
| 2005-2006 | Rs.8,41,180 |
| 2006-2007 | Rs.10,44,050 |
| 2007-2008 | Rs.9,46,150 |
| 2008-2009 | Rs.9,28,500 |
| 2009-2010 | Rs.9,41,850 |
| 2010-2011 | Rs.9,18,350 |
| 2011-2012 | Rs.9,74,700 |
| 2012-2013 | Rs.9,57,250 |




2012–2013ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಒಟ್ಟೂ ರೂ.9,57,250/– ಸಂಗ್ರಹವಾಗಿದೆ. ಸಂಗ್ರಹಿಸಿದ ಈ ಹಣವನ್ನು ರಿಸರ್ವ ಫಂಡ ಖಾತೆಗೆ ವಿನಿಯೋಗಿಸಬೇಕಾಗುತ್ತದೆ. ಆದರೆ ಶಾಲಾ–ಕಾಲೇಜುಗಳ ನಿರ್ವಹಣೆ ವೆಚ್ಚಕ್ಕಾಗಿ, ಅಭಿವೃದ್ಧಿ ಕಾರ್ಯಕ್ಕೆ, ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇನ್ನಿತರ ಕಾರ್ಯಗಳಿಗೆ ಟ್ರಸ್ಟು ಈ ಹಣ ವಿನಿಯೋಗಿಸುವದರಿಂದ ರೂಪಿ ರಿಸರ್ವ ಫಂಡ ನಿಂದ ಸಂಗ್ರಹವಾಗುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಲಿಲ್ಲ. ಟ್ರಸ್ಟಿಗೆ ಬರುವ ಆದಾಯ, ದೇಣಿಗೆ ಹೆಚ್ಚಾದಲ್ಲಿ ಈ ಹಣವನ್ನು ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಬಹುದು. ಟ್ರಸ್ಟಿಗೆ ಬರುವ ಆದಾಯ ಇನ್ನೂ ಹೆಚ್ಚಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿ ವಿನಂತಿಸುತ್ತೇನೆ.

ಟ್ರಸ್ಟಿಗೆ ಬರುವ ಆದಾಯ ಪ್ರತಿ ವರ್ಷ ರೂ.50 ಲಕ್ಷ ದಷ್ಟಾದರೆ, ಟ್ರಸ್ಟು Rupee Reserve Fund ಹಣ ಹಾಗೂ ಇತರೆ ಉದ್ದೇಶಕ್ಕಾಗಿ ಬರುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಿದೆ. ಟ್ರಸ್ಟಿನ ಬಹುತೇಕ ಎಲ್ಲ ಶಾಲೆ–ಕಾಲೇಜುಗಳಲ್ಲಿ ಕಟ್ಟಡ ನಿರ್ಮಿಸಿ ಸುಮಾರು 50 ರಿಂದ 60 ವರ್ಷಗಳಾಗಿವೆ. ಈ ಎಲ್ಲ ಕಟ್ಟಡ ರಿಪೇರಿಗಾಗಿ ಹಾಗೂ ಮೆಂಟೇನನ್ಸ್‌ಕ್ಕಾಗಿ ಸಾಕಷ್ಟು ಹಣ ಬೇಕಾಗುತ್ತದೆ. ಅದರ ಜೊತೆಗೆ ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ, ಭವಿಷ್ಯ ನಿಧಿ ವಂತಿಗೆಗಾಗಿ ಅಪಾರ ಪ್ರಮಾಣದಲ್ಲಿ ಹಣ ಬೇಕಾಗುತ್ತದೆ. ಈಗ ನಾವು ಸಂಗ್ರಹಿಸುವ Rupee Reserve Fund ಹಾಗೂ ಇತರ ಮೆಂಟೇನನ್ಸ್ ಹಣವನ್ನು ಪುನರ್ ಪರಿಶೀಲಿಸಬೇಕಾಗಿದೆ. ಈ ಕುರಿತು ಮಾನ್ಯ ಅಧ್ಯಕ್ಷರು ಸೂಕ್ತ ಮಾರ್ಗದರ್ಶನ ನೀಡಬೇಕಾಗಿ ವಿನಂತಿಸುತ್ತೇನೆ.

## 19.2012–2013ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಬೋಧಕ–ಬೋಧಕೇತರರು

| | | |
|---|---|---|
| 1 | **ಡಾ.ಆರ್.ಜಿ.ಗುಂದಿ**<br>ಪ್ರಾಚಾರ್ಯರು, ದಿವೇಕರ ವಾಣಿಜ್ಯ ಕಾಲೇಜ್, ಕಾರವಾರ, ಇವರು ದಿನಾಂಕ 31–03–2013 ರಂದು ಸೇವಾ ನಿವೃತ್ತಿ ಹೊಂದಿರುತ್ತಾರೆ. |  |
| 2 | **ಶ್ರೀ ಎಸ್.ಬಿ.ಗೌಡ**<br>ದ್ವಿತೀಯ ದರ್ಜೆ ಸಹಾಯಕರು ದಿ.31–01–2013 ರಂದು ಜ.ವಿ. ಸಂಯುಕ್ತ ಪ.ಪೂ.ಕಾಲೇಜ್, ಕಡತೋಕಾದಿಂದ ಸೇವಾ ನಿವೃತ್ತಿ ಹೊಂದಿರುವರು. |  |
| 3 | **ಶ್ರೀ ವಿ.ಎಸ್.ಮೊಗೇರ**<br>ಪ್ರಥಮ ದರ್ಜೆ ಸಹಾಯಕರು ದಿ.31–05–2013 ರಂದು ಜ.ವಿ. ಸಂಯುಕ್ತ ಪ.ಪೂ.ಕಾಲೇಜ್, ಶಿರಾಲಿಯಿಂದ ಸೇವಾ ನಿವೃತ್ತಿ ಹೊಂದಿರುತ್ತಾರೆ. |  |
| 4 | **ಶ್ರೀಮತಿ ಎಚ್.ಎಚ್.ಶೇಖ**<br>ಹಿರಿಯ ಸಹಾಯ ಶಿಕ್ಷಕಿ, ಉರ್ದು ಮಾಧ್ಯಮ ಪಿ.ಎಂ.ಹೈಸ್ಕೂಲ, ಅಂಕೋಲಾ ಇವರು ದಿನಾಂಕ 31–05–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 5 | **ಶ್ರೀ ಎಂ.ಕೆ.ಮುಕ್ರಿ**<br>ಜವಾನ ಜನತಾ ವಿದ್ಯಾಲಯ, ಕಾಸರಕೋಡ, ಇವರು ದಿನಾಂಕ 31–05–2013ರಂದು ಸೇವೆಯಿಂದ ನಿವೃತ್ತಿ ಹೊಂದಿದ್ದಾರೆ. |  |
| 6 | **ಶ್ರೀ ರಾಮಾ ಬೀರಾ ಗೌಡ**<br>ಜವಾನ, ಎಸ್.ಕೆ.ಪಿ.ಹೈಸ್ಕೂಲ, ಕತಗಾಲ, ಇವರು ದಿನಾಂಕ 31–05–2013 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 7 | **ಶ್ರೀ ಎಂ.ಎಂ.ನಾಯ್ಕ**<br>ದ್ವಿತೀಯ ದರ್ಜೆ ಸಹಾಯಕರು, ಜನತಾ ವಿದ್ಯಾಲಯ, ಕಾಸರಕೋಡ, ಇವರು ದಿನಾಂಕ 18–04–2012 ರಂದು ಸೇವಾಯಲ್ಲಿರುವಾಗ ನಿಧನ ಹೊಂದಿದ್ದಾರೆ. |  |
| 8 | **ಶ್ರೀ ಅನಂತ ಎನ್.ನಾಯ್ಕ**<br>ಅಟೆಂಡರ್, ಜನತಾ ವಿದ್ಯಾಲಯ, ಕಡತೋಕಾ, ಇವರು ದಿನಾಂಕ 31–05–2012 ರಂದು ಸೇವಾ ನಿವೃತ್ತಿ ಹೊಂದಿರುವರು. |  |

| | | |
|---|---|---|
| 9 | **ಶ್ರೀ ವಿ.ಕೆ.ಭಾಸ್ಕರನ**<br>ಸಹ–ಶಿಕ್ಷಕರು, ಆಂಗ್ಲ ಮಾಧ್ಯಮ ಶಾಲೆ, ದಾಂಡೇಲಿ, ಇವರು ದಿನಾಂಕ 30–04–2012 ರಂದು ಸೇವಾ ನಿವೃತ್ತಿ ಹೊಂದಿರುವರು. |  |
| 10 | **ಶ್ರೀಮತಿ ಮೋಹಿನಿ ರೈನಾ**<br>ಆಯಾ, ಆಂಗ್ಲ ಮಾಧ್ಯಮ ಶಾಲೆ, ದಾಂಡೇಲಿ, ಇವರು ದಿನಾಂಕ 30–06–2012 ರಂದು ಸೇವಾ ನಿವೃತ್ತಿ ಹೊಂದಿರುವರು. |  |

ಟ್ರಸ್ಟಿನ ವಿವಿಧ ಶಾಲಾ–ಕಾಲೇಜುಗಳಲ್ಲಿ ಅನೇಕ ವರ್ಷ ಸೇವೆ ಸಲ್ಲಿಸಿ, ಸೇವಾ ನಿವೃತ್ತಿ ಹೊಂದಿದ ಎಲ್ಲರ ಸೇವೆ ಸ್ಮರಿಸಿ, ಅವರ ನಿವೃತ್ತಿ ಜೀವನ ಶುಭದಾಯಕವಾಗಲಿ ಎಂದು ಟ್ರಸ್ಟಿನ ಹಾಗೂ ತಮ್ಮೆಲ್ಲರ ಪರವಾಗಿ ಹಾರೈಸುತ್ತೇನೆ.

## 20. ಸಾವಿನಲ್ಲಿಯೂ ಸೇವೆಯ ಕನಸು – ಗಣಪತಿ ಅಣ್ಣಪ್ಪಯ್ಯ ಪೈ



ಶ್ರೀ ಗಣಪತಿ ಅಣ್ಣಪ್ಪಯ್ಯ ಪೈಯವರು ಮೂಲತಃ ಕಾರವಾರದವರು. 1948ರಲ್ಲಿ ಹಿಂದು ಹೈ ಸ್ಕೂಲ್, ಕಾರವಾರದಲ್ಲಿ ಮೆಟ್ರಿಕ್ಯೂಲೇಶನ್ ಮುಗಿಸಿ ಮುಂಬಯಿಗೆ ಹೋದರು. ಅಲ್ಲಿ ಬಹಳಷ್ಟು ಶ್ರಮ ಪಟ್ಟು ವಿವಿಧ ಕಡೆ ಕೆಲಸ ಮಾಡಿದರು. Financing Agriculture ಪತ್ರಿಕೆಯ Managing Editor ರಾಗಿ ಬಹು ವರ್ಷ ಕಾರ್ಯ ನಿರ್ವಹಿಸಿದರು. ಹಲವು ಪ್ರಸಿದ್ಧ ಸಂಘ–ಸಂಸ್ಥೆಗಳಲ್ಲಿಯೂ ಕೂಡಾ ಅವರು ಸದಸ್ಯರಾಗಿದ್ದು, ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು. ಇವರು ಅವಿವಾಹಿತರಾಗಿದ್ದರು. ಸೇವೆಯಿಂದ ನಿವೃತ್ತರಾದ ನಂತರ ಇವರು ಅಂಕೋಲೆಯ ಕ್ರಿಸ್ತ ಮಿತ್ರ ಆಶ್ರಮದ ಸೇವಾ ಮಂದಿರದಲ್ಲಿ (ವೃದ್ಧಾಶ್ರಮ) ಸೇರಿಕೊಂಡರು. ಕೆಲವು ವರ್ಷ ಅಲ್ಲಿ ವಾಸವಾಗಿದ್ದರು.

ಚಿಕ್ಕಂದಿನಿಂದ ಇವರಿಗೆ ಡಾ.ದಿನಕರ ದೇಸಾಯಿಯವರ ಸಂಪರ್ಕವಿತ್ತು. ವೃದ್ಧಾಶ್ರಮದಲ್ಲಿರುವಾಗ ಕೆನರಾ ವೆಲ್‌ಫೇರ್ ಟ್ರಸ್ಟ್ ಕಛೇರಿಗೆ ದೂರವಾಣಿಯ ಮೂಲಕ ಸಂಪರ್ಕಿಸಿ ಡಾ. ದಿನಕರ ದೇಸಾಯಿಯವರ ಪುಸ್ತಕವನ್ನು ಖರೀದಿಸಿದರು. ಅಂದಿನಿಂದ ಇವರ ಸಂಪರ್ಕ ಪ್ರಾರಂಭವಾಯಿತು. ಇವರ ಸಂಪರ್ಕವಾದ ಮೇಲೆ ಟ್ರಸ್ಟಿನಲ್ಲಿ ಕಾರ್ಯ ನಿರ್ವಹಿಸುವ ಶ್ರೀ ಪ್ರಶಾಂತ ರಾವ್ ಮತ್ತು ಶ್ರೀ ರಾಜು ನಾಯ್ಕ ಇವರು ಅನೇಕ ಬಾರಿ ಶ್ರೀ ಪೈಯವರನ್ನು ಭೆಟ್ಟಿಯಾಗುತ್ತಿದ್ದರು. ಟ್ರಸ್ಟಿನ ಆಡಳಿತಾಧಿಕಾರಿಯಾದ ಶ್ರೀ ಕೃಷ್ಣಾನಂದ ಶೆಟ್ಟಿ ಯವರು ಕೂಡಾ ಅವರಿಗೆ ಭೆಟ್ಟಿಯಾಗಿ ಅವರೊಡನೆ ಚರ್ಚಿಸುತ್ತಿದ್ದರು. ಶ್ರೀಯುತ ಪೈಯವರಿಗೆ ಟ್ರಸ್ಟಿನ ಮೇಲೆ ವಿಶೇಷ ಅಭಿಮಾನ ಪ್ರರಂಭವಾಯಿತು. ಟ್ರಸ್ಟಿನ ವಿವಿಧ ಕಾರ್ಯಕ್ರಮ ನೋಡಿ ತಿಳಿದುಕೊಂಡು

ಟ್ರಸ್ಟಿನ ಬಗ್ಗೆ ಹೆಮ್ಮೆ ಪಡುತ್ತಿದ್ದರು. ಇದರಿಂದ ಶ್ರೀ ಪೈಯವರ ಸಂಬಂಧ ಟ್ರಸ್ಟಿನೊಡನೆ ಬೆಳೆಯುತ್ತ ಬಂತು. ಸಂಬಂಧ ಹೆಚ್ಚಾದ ನಂತರ ಅವರು ತಮ್ಮ ಕಡೆಗಿದ್ದ ಅನೇಕ ಉತ್ತಮ ಪುಸ್ತಕಗಳನ್ನು ಹಾಗೂ ಮ್ಯಾಗೆಜಿನ್‌ಗಳನ್ನು ಟ್ರಸ್ಟಿಗೆ ದಾನವಾಗಿ ನೀಡಿದರು.

ಶ್ರೀ ಪೈಯವರು ತಮ್ಮ ಕೆಲವು ವಿಚಾರಗಳನ್ನು, ಅನಿಸಿಕೆಗಳನ್ನು ನಮ್ಮ ಮುಂದೆ ವ್ಯಕ್ತಪಡಿಸಿದರು. ತಾವು ಟ್ರಸ್ಟಿನ ಹೆಸರಿಗೆ ಒಂದು Will ಮಾಡುವದಾಗಿ ಇಚ್ಛೆ ವ್ಯಕ್ತಪಡಿಸಿದರು. ಅವರ ಹೇಳಿದ ಎಲ್ಲ ವಿಚಾರವನ್ನು ಟ್ರಸ್ಟಿನ ಅಧ್ಯಕ್ಷರ ಗಮನಕ್ಕೆ ತಂದಾಗ ಅಧ್ಯಕ್ಷರು ಅದಕ್ಕೆ ಒಪ್ಪಿ ಶ್ರೀ ಪೈಯವರ ಇಚ್ಛೆಯಂತೆ ಒಂದು Will draft ಮಾಡಿ ಕೊಟ್ಟರು. ಶ್ರೀಯುತ ಪೈಯವರ ವಿಚಾರದಂತೆ, Willನ್ನು ದಿನಾಂಕ 16–10–2012 ರಂದು ಕಾರವಾರದಲ್ಲಿ ರಜಿಸ್ಟರ್ ಮಾಡಿಸಲಾಯಿತು. ಶ್ರೀಯುತ ಪೈಯವರ ಹಾಗೂ ಟ್ರಸ್ಟಿನ ಸಿಬ್ಬಂದಿಯವರ ಸಂಬಂಧ ಉತ್ತಮ ರೀತಿಯಲ್ಲಿ ಮುಂದುವರೆಯಿತು.

ಕೆಲವು ತಿಂಗಳ ನಂತರ ಪೈಯವರಿಗೆ ಅನಾರೋಗ್ಯ ಉಂಟಾಯಿತು. ಅವರನ್ನು ಕೂಡಲೇ ಅಲ್ಲಿಂದ ಆಸ್ಪತ್ರೆಗೆ ಸೇರಿಸಿ ಯೋಗ್ಯ ಚಿಕಿತ್ಸೆ ನೀಡಲಾಯಿತು ಹಾಗೂ ಅವರಿಗೆ ಉಳಿಯಲು ಆಸ್ಪತ್ರೆಯಲ್ಲಿಯೇ ಒಂದು ರೂಮಿನ ವ್ಯವಸ್ಥೆ ಮಾಡಿ ಕೊಟ್ಟು, ಊಟ–ಉಪಚಾರದ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ಮಾಡಲಾಯಿತು.

ದಿನಾಂಕ 03–12–2012 ರಂದು ಅವರಿಗೆ ಉಸಿರಾಟದ ತೊಂದರೆ ಉಂಟಾಯಿತು. ಅವರಿಗೆ ಬೇಕಾದ ಎಲ್ಲ ತುರ್ತು ಚಿಕಿತ್ಸೆ ನೀಡಲಾಯಿತು. ಅವರು 04–12–2012 ರಂದು ಮಧ್ಯಾಹ್ನ ದೈವಾದೀನರಾದರು. ಅವರಿಗೆ 82 ವರ್ಷ ವಯಸ್ಸಾಗಿತ್ತು.

ಅವರು Will ನಲ್ಲಿ ನಮೂದಿಸಿದಂತೆ ಹಾಗೂ ಅವರ ಇಚ್ಛೆಯಂತೆ ಹಿಂದು ಧರ್ಮದ ಪ್ರಕಾರ ಅವರ ಶವ–ಸಂಸ್ಕಾರ ನಡೆಸಿ, ವಿಧಿವತ್ತಾಗಿ ಉಳಿದ ಕಾರ್ಯ ಮಾಡಿಸಲಾಯಿತು.

ಅವರು ದೈವಾದೀನರಾದ ನಂತರ ಅವರು Will ನಲ್ಲಿ ನಮೂದಿಸಿದಂತೆ ಅವರ ಖಾತೆಯಲ್ಲಿದ್ದ ರೂ.5 ಲಕ್ಷ ಟ್ರಸ್ಟಿನ ಹೆಸರಿಗೆ ವರ್ಗಾಯಿಸಲಾಯಿತು. ಆ ಹಣವನ್ನು Fixed Deposit ನಲ್ಲಿ ಇಡಲಾಗಿದೆ.

ದಿವಂಗತ ಗಣಪತಿ ಪೈಯವರು ಸಜ್ಜನರಾಗಿದ್ದರು. ಅವರ ಆಚಾರ–ವಿಚಾರಗಳು ಉನ್ನತವಾಗಿದ್ದವು. ಶ್ರೀ ಪೈಯವರ ಜೀವನದ ಕೊನೆಯ ದಿವಸದವರೆಗೂ ಶ್ರೀ ಪ್ರಶಾಂತ ರಾವ್ ಮತ್ತು ಶ್ರೀ ರಾಜು ನಾಯ್ಕ ಅವರ ಸೇವೆಯನ್ನು ಅತ್ಯಂತ ಪ್ರೀತಿಯಿಂದ ಮಾಡಿರುವರು.

ಟ್ರಸ್ಟಿನ ಶಿಕ್ಷಣ ಸಂಸ್ಥೆಗಳಲ್ಲಿ ಸಂಸ್ಕೃತ ವಿಷಯದ ಕುರಿತು ಕಾರ್ಯಕ್ರಮ / ಸ್ಪರ್ಧೆಯನ್ನು ನಡೆಸಿ ಅರ್ಹರಿಗೆ ಬಹುಮಾನ / ಸ್ಕಾಲರ್‌ಶಿಪ್ ನೀಡಬೇಕೆಂದು ದಿವಂಗತ ಪೈಯವರ ಇಚ್ಛೆ ಇತ್ತು. ಅವರ ಇಚ್ಛೆಯನ್ನು ಈಡೇರಿಸಲು ಟ್ರಸ್ಟು ಒಂದು ಯೋಜನೆ ರೂಪಿಸಬೇಕಾಗಿದೆ.

## 21.ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ

ಟ್ರಸ್ಟಿನ ನಿರ್ದೇಶನದಂತೆ ಈ ವರ್ಷವೂ ಕೂಡಾ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡವು ಟ್ರಸ್ಟಿನ ವಿವಿಧ ಸಂಸ್ಥೆಗಳಿಗೆ ಭೆಟ್ಟಿ ನೀಡಿ ಎಲ್ಲ ಶಾಲೆಗಳ, ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ ನಡೆಸಿರುತ್ತದೆ. ಪದವಿ ಹಾಗೂ ಪದವಿ ಪೂರ್ವ ವಿಭಾಗದ ಲೆಕ್ಕ ಪತ್ರಗಳನ್ನು ಕೂಡಾ ಪರಿಶೀಲಿಸಲಾಗಿದೆ. ಪರಿಶೀಲನಾ ಸಂದರ್ಭದಲ್ಲಿ ಕಂಡುಬಂದ ಕೆಲವು ಅಂಶಗಳನ್ನು ಪ್ರತ್ಯೇಕ ವರದಿಯಲ್ಲಿ ನೀಡಲಾಗಿದೆ. ಶೈಕ್ಷಣಿಕ ಪರಿಶೀಲನಾ ವರದಿಯನ್ನು ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನೀಡಲಾಗಿದೆ.

ಈ ಪರಿಶೀಲನಾ ತಂಡದಲ್ಲಿ ವಿಷಯ ತಜ್ಞರಾಗಿ ಆಫೀಸ ಹಾಗೂ ಲೆಕ್ಕಪತ್ರ ಪರಿಶೀಲಕರಾಗಿ ಈ ಕೆಳಗಿನವರು ಭಾಗವಹಿಸಿದ್ದರು.

| | | |
|---|---|---|
| 1. | ಪ್ರೊ. ಜಿ.ವಿ.ಭಟ್ಟ | ಧರ್ಮದರ್ಶಿಗಳು, ಕೆನರಾ ವೆಲ್‌ಫೆರ್ ಟ್ರಸ್ಟ, ಅಂಕೋಲಾ |
| 2. | ಶ್ರೀ ವಿಷ್ಣು ನಾಯ್ಕ | ನಿವೃತ್ತ ಪ್ರಾಚಾರ್ಯರು, ಅಂಕೋಲಾ |
| 3. | ಪ್ರೊ. ಎಂ.ಎಸ್.ಹಬ್ಬು | ನಿವೃತ್ತ ಪ್ರಾಚಾರ್ಯರು, ಅಂಕೋಲಾ |
| 4. | ಪ್ರೊ. ವಿ.ಆರ್.ವೆರ್ಣೇಕರ | ನಿವೃತ್ತ ಪ್ರಾಚಾರ್ಯರು, ಅಂಕೋಲಾ |
| 5. | ಶ್ರೀ ರವೀಂದ್ರ ವಿ.ಕೇಣಿ | ಪ್ರಾಚಾರ್ಯರು, ಪಿ.ಎಂ.ಸಂಯುಕ್ತ ಪ.ಪೂ.ಕಾಲೇಜ,ಅಂಕೋಲಾ |
| 6. | ಶ್ರೀ ಎನ್.ಕೆ.ಭಟ್ಟ | ಉಪನ್ಯಾಸಕರು, ಜ.ವಿ.ಸಂ.ಪ.ಪೂ.ಕಾಲೇಜ, ದಾಂಡೇಲಿ |
| 7. | ಶ್ರೀ ವಿ.ಪಿ.ಶಾನಭಾಗ | ಶಿಕ್ಷಕರು, ಜನತಾ ವಿದ್ಯಾಲಯ, ಬಾಡ–ಕಾಗಲ |
| 8. | ಶ್ರೀ ಪಿ.ಪಿ.ಮಲ್ಯ | ಶಿಕ್ಷಕರು, ಪಿ.ಎ.ಹೈ ಸ್ಕೂಲ್, ಅಂಕೋಲಾ |
| 9. | ಶ್ರೀ ಎಸ್.ವಿ.ಮುಳಗುಂದ | ನಿವೃತ್ತ ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 10. | ಶ್ರೀ ಎನ್.ವಿ.ಹೆಗಡೆ | ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 11. | ಶ್ರೀ ಎಸ್.ಎಸ್.ಶಾಸ್ತ್ರಿ | ಶಿಕ್ಷಕರು, ಜನತಾ ವಿದ್ಯಾಲಯ, ಧಾರೇಶ್ವರ |
| 12. | ಶ್ರೀ ನೀಲಕಂಠ ಜಿ.ನಾಯ್ಕ | ಉಪನ್ಯಾಸಕರು, ಬಿ.ಎಡ್.ಕಾಲೇಜ, ದಾಂಡೇಲಿ |
| 13. | ಶ್ರೀಮತಿ ಲತಾ ವಿ.ಶೇಣ್ವಿ | ಉಪನ್ಯಾಸಕರು, ಬಂಗೂರು ನಗರ ಪ.ಪೂ.ಕಾಲೇಜ್, ದಾಂಡೇಲಿ |
| 14. | ಶ್ರೀ ಕೃಷ್ಣಾನಂದ ವಿ.ಶೆಟ್ಟಿ | ಆಡಳಿತಾಧಿಕಾರಿ, ಕೆನರಾ ವೆಲ್‌ಫೆರ್ ಟ್ರಸ್ಟ, ಅಂಕೋಲಾ |
| 15. | ಶ್ರೀ ಪ್ರಶಾಂತ ಎನ್.ರಾವ್ | ಸ್ಪೆಷಲ್ ಕೋ–ಆರ್ಡಿನೇಟರ, ಕೆನರಾ ವೆಲ್‌ಫೆರ್ ಟ್ರಸ್ಟ |
| 16. | ಶ್ರೀ ರಾಜು ಜಿ.ನಾಯ್ಕ | ಆಫೀಸ ಸಹಾಯಕರು, ಕೆನರಾ ವೆಲ್‌ಫೆರ್ ಟ್ರಸ್ಟ |

ಇವರೆಲ್ಲರ ಸಹಕಾರದಿಂದ ಟ್ರಸ್ಟಿನ ಎಲ್ಲ ಶಾಲೆಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು. ಪ್ರತಿಯೊಂದು ಶಾಲೆಯ ಶೈಕ್ಷಣಿಕ ಪ್ರಗತಿ ಪರಿಶೀಲಿಸಿ, ಅಲ್ಲಿಯ ಕುಂದುಕೊರತೆಗಳನ್ನು ಶಿಕ್ಷಕರ ಸಮಕ್ಷಮ ಚರ್ಚಿಸಲಾಯಿತು. ಬಹುತೇಕ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ವಾತಾವರಣ ಚೆನ್ನಾಗಿರುವದಾಗಿ ಪರಿಶೀಲನಾ ಸಮಿತಿ ಅಭಿಪ್ರಾಯ ಪಟ್ಟಿದೆ. ಶೈಕ್ಷಣಿಕ ವಾತಾವರಣ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಶೆಯಲ್ಲಿ ಅನೇಕ ಸಲಹೆ ಸೂಚನೆಗಳನ್ನು ವರದಿಯಲ್ಲಿ ನೀಡಲಾಗಿದೆ. 2012–2013ನೇ ಸಾಲಿನ ಪರಿಶೀಲನಾ ವರದಿಯನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಗೆ ನೀಡಲಾಗಿದೆ.

## 22. ಪ್ರಗತಿ ಪರಿಶೀಲನಾ ತಂಡದ ಸಲಹೆಗಳು

- "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವದು.
- ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವದು.
- ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಯತ್ನಿಸುವದು.
- ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವದು.
- ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರೀಯಾಶೀಲತೆಯನ್ನು ಹೆಚ್ಚಿಸಿಕೊಂಡು, ಸಮಾಜದಲ್ಲಿ ಗೌರವ ಸಂಪಾದಿಸಿಕೊಂಡು, ಶಾಲೆಗೂ ಟ್ರಸ್ಟಿಗೂ ಕೀರ್ತಿ ಬರುವಂತೆ ಕಾರ್ಯ ನಿರ್ವಹಿಸುವದು.

## 23. ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ

2012–2013ನೇ ಸಾಲಿನ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಕಾಲೇಜ್, ಜ್ಯೂನಿಯರ್ ಕಾಲೇಜ್ ಹಾಗೂ ಹೈಸ್ಕೂಲಿನ ಆಫೀಸ ಕಾರ್ಯನಿರ್ವಹಣೆ ಹಾಗೂ ಲೆಕ್ಕ ಪತ್ರದ ಪರಿಶೀಲನೆಯನ್ನು ಕೈಗೊಳ್ಳಲಾಗಿದೆ. ಈ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಈ ಕೆಳಗೆ ನೀಡಲಾಗಿದೆ.

1. ಹೈಸ್ಕೂಲಗಳಲ್ಲಿ, ಪದವಿ ಪೂರ್ವ ಕಾಲೇಜುಗಳಲ್ಲಿ ಹಾಗೂ ಪದವಿ ಕಾಲೇಜುಗಳಲ್ಲಿ ಮುಖ್ಯವಾಗಿ ಈ ಕೆಳಗೆ ನಮೂದಿಸಿದ 3 ಲೆಕ್ಕವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ.
    - Govt. A/c Book
    - Non-Govt. A/c Book
    - Management A/c Book

- ಲೆಕ್ಕಪತ್ರ ನಿರ್ವಹಣೆಯ ಸಿಬ್ಬಂದಿಯು ಪ್ರತಿಯೊಂದು ಲೆಕ್ಕದ ವ್ಯವಹಾರವನ್ನು ಆಯಾ ದಿವಸವೇ ಬರೆದು ಅಂತಿಮ ಶಿಲ್ಕು ದಾಖಲಿಸಿದ ನಂತರ ಸಂಸ್ಥೆಯ ಮುಖ್ಯಸ್ಥರು ಅದನ್ನು ಪರಿಶೀಲಿಸಿ ಸಹಿ ಮಾಡುವದು ಕಡ್ಡಾಯ
- ಪ್ರತಿ ತಿಂಗಳು ತಪ್ಪದೆ ಪ್ರತಿಯೊಂದು ಲೆಕ್ಕದ ಜಮಾ–ಖರ್ಚು ಪತ್ರಿಕೆ ತಯಾರಿಸಬೇಕು ಹಾಗೂ ಆಡಳಿತ ಮಂಡಳಿಯ ಲೆಕ್ಕದ ಖಾತೆಯ ಜಮಾ–ಖರ್ಚಿನ ಪತ್ರಿಕೆಯ ಪ್ರತಿಯನ್ನು ಟ್ರಸ್ಟಿಗೆ ನಿಯಮಿತವಾಗಿ ಸಲ್ಲಿಸಬೇಕು.

- ಶಾಲಾ/ಕಾಲೇಜುಗಳ ಲೆಕ್ಕಪತ್ರ ನಿರ್ವಹಣೆ ಸರಿಯಾಗಿ ನಿರ್ವಹಿಸುವಂತೆ ಸಂಸ್ಥೆಯ ಎಲ್ಲ ಮುಖ್ಯಸ್ಥರೊಂದಿಗೆ ಹಾಗೂ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಯವರೊಡನೆ ಚರ್ಚಿಸಿ ಸಲಹೆ ಸೂಚನೆ ನೀಡಲಾಗಿದೆ.

2. ಲೈಬ್ರರಿ ಪುಸ್ತಕದ ಸ್ಟಾಕ್ ರಜಿಸ್ಟರ್‌ನ್ನು ಸರಿಯಾಗಿ ನಿರ್ವಹಿಸಿ ಪ್ರತಿ ವರ್ಷದ ಕೊನೆಯಲ್ಲಿ ಪುಸ್ತಕಗಳ ಪರಿಶೀಲನೆ ನಡೆಸಿ ಕಳೆದುಹೋದ ಇಲ್ಲವೇ ಹಾಳಾದ ಪುಸ್ತಕಗಳ ಪಟ್ಟಿ ಮಾಡಿ ಅದನ್ನು ಸಂಬಂಧಿಸಿದ ಇಲಾಖೆಯಿಂದ / ಆಡಳಿತ ಮಂಡಳಿಯಿಂದ ಮಂಜೂರಿ ಪಡೆದು ಸ್ಟಾಕಿನಲ್ಲಿ ಅಷ್ಟು ಪುಸ್ತಕವನ್ನು ಕಡಿಮೆ ಮಾಡಬೇಕು. ಇದನ್ನು ಕೆಲವು ಕಡೆ ನಿರ್ವಹಿಸಿದ್ದಾರೆ. ಇನ್ನೂ ಕೆಲವು ಸಂಸ್ಥೆಗಳು ಸರಿಯಾಗಿ ನಿರ್ವಹಿಸಿದ್ದು ಕಂಡುಬರಲಿಲ್ಲ. ಈ ಬಗ್ಗೆ ಹಿಂದಿನ ವರ್ಷದ ವರದಿಯಲ್ಲಿ ತಿಳಿಸಲಾಗಿತ್ತು. ಪುಸ್ತಕದ ಸ್ಟಾಕ್ ರಜಿಸ್ಟರನ್ನು ಹಾಗೂ ಇನ್ನಿತರ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು.

3. ಶಾಲೆ / ಕಾಲೇಜಿನ ಹೆಸರಿಗೆ ಮಂಜೂರಾದ ಜಾಗೆಯ ರಿಕಾರ್ಡನ್ನು ಪ್ರತಿ ವರ್ಷ ಸಂಬಂಧಿಸಿದ ತಹಶೀಲದಾರರಿಂದ ಪಡೆಯಬೇಕು. ಲೀಜ್ ಮೇಲೆ ಮಂಜೂರಾದ ಜಾಗೆಯ ಕುರಿತು, ಲೀಜ್ ಅವಧಿ ಮುಗಿಯುವ ಸಾಕಷ್ಟು ಪೂರ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಲೀಜ್ ಅವಧಿಯನ್ನು ವಿಸ್ತರಿಸಿಕೊಳ್ಳಬೇಕು ಹಾಗೂ ಆ ಬಗ್ಗೆ ಟ್ರಸ್ಟಿಗೆ ಕಾಲಕಾಲಕ್ಕೆ ಮಾಹಿತಿ ಸಲ್ಲಿಸಬೇಕು. ಪ್ರತಿ ವರ್ಷ ಶೈಕ್ಷಣಿಕ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಸಂಸ್ಥೆಯ ಜಾಗದ ಹೊಸ ರಿಕಾರ್ಡ ನೀಡಬೇಕು. ಈ ವರ್ಷ ಎಲ್ಲ ಸಂಸ್ಥೆಯ ಮುಖ್ಯಸ್ಥರು ಸಕಾಲದಲ್ಲಿ ಮಾಹಿತಿಯನ್ನು ಪೂರೈಸಿರುವರು.

4. Kruger Foundation ನಿಂದ ಮಂಜೂರಾದ ಹಣವನ್ನು ಟ್ರಸ್ಟಿನ ವಿವಿಧ ಮಾಧ್ಯಮಿಕ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1000/– ರಂತೆ ನೀಡಲು ಸಂಸ್ಥೆಯ ಅಧ್ಯಕ್ಷರು ತಿಳಿಸಿದಂತೆ ಸಂಸ್ಥೆಗೆ ಹಣ ನೀಡಲಾಗಿದೆ. ಟ್ರಸ್ಟಿನ ವಿವಿಧ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಶಿಕ್ಷಕರು ತಮ್ಮ ಬಿಡುವಿನ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರ ಶಿಕ್ಷಣ ಮಟ್ಟ ಸುಧಾರಿಸುವಂತೆ ವಿಶೇಷ ಪ್ರಯತ್ನ ಮಾಡಬೇಕು. ಈ ಕುರಿತು ದಾಖಲೆಯನ್ನು ಇಡಬೇಕು. ಶಾಲೆಯ ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿ ಅಭ್ಯಾಸದಲ್ಲಿ ಹಿಂದುಳಿದ ಮಕ್ಕಳಿಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರು ವಿಶೇಷ ತರಬೇತಿ ಸರಿಯಾಗಿ ನೀಡುತ್ತಿರುವದನ್ನು ಪರಿಶೀಲಿಸಿ ಧೃಢೀಕರಿಸಿಕೊಳ್ಳಬೇಕು. ಈ ಕೆಲಸ ಸರಿಯಾಗಿ ನಿರ್ವಹಿಸುವವರಿಗೆ ಮಾತ್ರ ಈ ಸಹಾಯಧನ ನೀಡಬೇಕು.

5. ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಪ್ರಗತಿಗೆ ಸಹಾಯಕಾರಿಯಾಗಿದೆ ಎಂಬುದು ಪರಿಶೀಲನಾ ಸಮಿತಿಯ ಅಭಿಪ್ರಾಯವಾಗಿದೆ. ಈ ಯೋಜನೆಯನ್ನು ಈ ವರ್ಷವೂ ಮುಂದುವರೆಸಿದ ಬಗ್ಗೆ Kruger Foundation ಸಂಸ್ಥೆಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದವನ್ನು ಸಲ್ಲಿಸುತ್ತೇವೆ. ಈ ಯೋಜನೆಯ ಲಾಭ ಎಲ್ಲ ಅರ್ಹ ಮಕ್ಕಳಿಗೆ ಲಭಿಸುವಲ್ಲಿ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ನೀಡುವ ಅವಶ್ಯಕತೆ ಇದೆ.

6. ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ಅವರು ಪಡೆದ ರಜೆಯ ವಿವರಗಳನ್ನು ಸರಿಯಾಗಿ ನಮೂದಿಸಬೇಕು. ವಾರ್ಷಿಕ ಮುಂಭಡ್ತಿ ಹಾಗು ಇನ್ನಿತರ ಸೇವಾ ಭಡ್ತಿಗಳನ್ನು ಕಾಲಕಾಲಕ್ಕೆ ಸರಿಯಾಗಿ ಸೇವಾ ಪುಸ್ತಕದಲ್ಲಿ ನಮೂದಿಸಿ, ಸಂಸ್ಥೆಯ ಮುಖ್ಯಸ್ಥರು ದೃಢೀಕರಿಸಬೇಕು.
7. ಶಾಲಾ / ಕಾಲೇಜಿನ ಮುಖ್ಯಸ್ಥರು ರಜೆಯ ಮೇಲೆ ಹೋಗುವ ಪೂರ್ವದಲ್ಲಿ ತಮ್ಮ ರಜೆಯ ಅರ್ಜಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಾಕಷ್ಟು ಮುಂಚಿತವಾಗಿ ಕಳುಹಿಸಬೇಕು. ಹಾಗೂ ತಮ್ಮ ಸಂಸ್ಥೆಯ ಹಿರಿಯ ಸಹೋದ್ಯೋಗಿಯವರಿಗೆ ತಮ್ಮ ರಜಾ ಅವಧಿಯಲ್ಲಿ In-charge ಆಗಿ ಕಾರ್ಯನಿರ್ವಹಿಸುವಂತೆ ಲಿಖಿತವಾಗಿ ತಿಳಿಸಬೇಕು. ವಾರ್ಷಿಕ ತಪಾಸಣಾ ಸಂದರ್ಭದಲ್ಲಿ ಕೆಲವು ಸಂಸ್ಥೆಗಳು ಇದನ್ನು ಪಾಲಿಸದೇ ಇರುವದು ಗಮನಕ್ಕೆ ಬಂದಿರುತ್ತದೆ. ಅವರಿಗೆ ಈ ಹಿಂದೆಯೂ ಕೂಡಾ ಸೂಚನೆ ನೀಡಲಾಗಿತ್ತು. ಈ ಕುರಿತು ಸುತ್ತೋಲೆಯನ್ನು ಕೂಡಾ ಹೊರಡಿಸಲಾಗಿದೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ರಜೆಯ ಅರ್ಜಿಯನ್ನು ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳದೆ ಇರುವದು ತಮ್ಮ ರಜಾ ಅವಧಿಯಲ್ಲಿ In-charge ವ್ಯವಸ್ಥೆ ಮಾಡದೆ ಇರುವದು ಕಂಡುಬಂದಿದೆ. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ರಜೆ ಅರ್ಜಿಯನ್ನು ಟ್ರಸ್ಟಿಗೆ ಸಲ್ಲಿಸಿ ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳುವಂತೆ ಇನ್ನೊಮ್ಮೆ ತಿಳಿಸಲಾಗಿದೆ. ಇದನ್ನು ಪಾಲಿಸದಿದ್ದರೆ ಆಡಳಿತಾತ್ಮಕವಾದ ತೊಂದರೆ ಉಂಟಾಗುತ್ತದೆ.
8. ಕೆಲವು ಶಾಲಾ/ಕಾಲೇಜುಗಳಲ್ಲಿ ಸಿಬ್ಬಂದಿಗಳ ಹಾಜರಿ ಪುಸ್ತಕದ ಮೇಲೆ ಮುಂಜಾನೆ ಹಾಗೂ ಮದ್ಯಾಹ್ನ ಪ್ರತ್ಯೇಕವಾಗಿ ಸಹಿ ಮಾಡುವ ಬದಲು ಮುಂಜಾನೆ ಬಂದಾಗಲೇ ಎರಡು ಸಹಿ ಮಾಡಿರುವದು ಕಂಡು ಬಂದಿದೆ. ಇದು ಸರಿಯಾದ ಕ್ರಮವಲ್ಲ. ಈ ಬಗ್ಗೆ ಸಂಬಂಧಿಸಿದ ಮುಖ್ಯಸ್ಥರಿಗೆ ತಿಳಿಸಲಾಗಿದೆ.
9. ಜನತಾ ವಿದ್ಯಾಲಯ, ಕಡವಾಡ ಶಾಲೆಯ ಲೆಕ್ಕಪತ್ರ ನಿರ್ವಹಣೆ ಅಸಮರ್ಪಕವಾಗಿದೆ. ಈ ಕುರಿತು ಅನೇಕ ಬಾರಿ ತಿಳಿಸಿದರೂ ಸುಧಾರಣೆ ಕಂಡು ಬಂದಿರುವದಿಲ್ಲ. ಶಾಲೆಯ ಆವಾರದ ಸ್ವಚ್ಛತೆ, ಕ್ಲಾಸ್ ರೂಮುಗಳ ಸ್ವಚ್ಛತೆ ಸಮಾದಾನಕಾರವಾಗಿರುವದಿಲ್ಲ. 2012–2013ನೇ ಸಾಲಿನ ಲೆಕ್ಕಪತ್ರ ಆಡಿಟ್ ಮಾಡಿಸುವಲ್ಲಿ ಬಹಳ ವಿಳಂಬ ಮಾಡಿದ್ದಾರೆ. ಕೊನೆಗೆ ಅವರ ಲೆಕ್ಕ ಪತ್ರದ ಪುಸ್ತಕಗಳನ್ನು ಟ್ರಸ್ಟ್ ಆಫೀಸಿಗೆ ತರಿಸಿ, ಪರಿಶೀಲಿಸಿ, ಹೊಸದಾಗಿ ಜಮಾ–ಖರ್ಚು ಸ್ಟೇಟ್‌ಮೆಂಟ್ ತಯಾರಿಸಿ ಕೊಟ್ಟು ಆಡಿಟ್ ಮಾಡಿಸಲಾಯಿತು. ಮುಖ್ಯಾಧ್ಯಾಪಕರು ಹೆಚ್ಚು ಕಾಳಜಿ ವಹಿಸಿ ಮುಂಬರುವ ದಿನಗಳಲ್ಲಿ ಗುಣಾತ್ಮಕ ಬದಲಾವಣೆ ತರಬೇಕು ಇಲ್ಲದಿದ್ದಲ್ಲಿ ಸಮಸ್ಯೆಯಾಗಲಿದೆ. ಎಲ್ಲ ಶಿಕ್ಷಕರು ಉತ್ತಮವಾಗಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುತ್ತಿದ್ದಾರೆ. ಇದೊಂದು ಸಮಾಧಾನಕರ ವಿಷಯವಾಗಿದೆ.

## 24. ಸಾಮಾನ್ಯ ಸೂಚನೆಗಳು

1. ಶಾಲಾ ಅಭಿವೃದ್ಧಿ ಕೆಲಸ ನಿರ್ವಹಿಸುವಾಗ ಇಲ್ಲವೆ ಲೈಬ್ರರಿ / ಲೆಬೋರೆಟರಿ / ಸ್ಪೋರ್ಟ್ಸ / ಪುಸ್ತಕ / ಸಲಕರಣೆ ಇತ್ಯಾದಿ ಖರೀದಿಸುವ ಸಂದರ್ಭದಲ್ಲಿ ಪ್ರತಿವರ್ಷ ಶೈಕ್ಷಣಿಕ ವರ್ಷ ಪ್ರಾರಂಭವಾದ ಕೂಡಲೆ ಈ ಕೆಳಗೆ ನಮೂದಿಸಿದವರ ಒಂದು ಉಪಸಮಿತಿ ನೇಮಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಕಾಲಕಾಲಕ್ಕೆ ಈ ಸಮಿತಿಯು ಅಭಿವೃದ್ಧಿ ಕಾರ್ಯದ ಜೊತೆಗೆ ಅದರ ಮೇಲ್ವಿಚಾರಣೆ ಕೂಡಾ ನಡೆಸುತ್ತಿರಬೇಕು ಈ ಉಪಸಮಿತಿಯಲ್ಲಿ –
    - ಸಂಸ್ಥೆಯ ಮುಖ್ಯಸ್ಥರು
    - ಹಿರಿಯ ಅಧ್ಯಾಪಕರು
    - ಸ್ಟಾಫ್ ಕೌನ್ಸಿಲ ಕಾರ್ಯದರ್ಶಿ ಹಾಗೂ
    - ಆಫೀಸನಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಸಿಬ್ಬಂದಿ ಇರಬೇಕು

    ಈ ಉಪಸಮಿತಿ ಕಾಲಕಾಲಕ್ಕೆ ಸಭೆ ಸೇರಿ ಅಭಿವೃದ್ಧಿ ಕೆಲಸದ ಬಗ್ಗೆ ಇಲ್ಲವೆ ಸಲಕರಣೆ ಖರೀದಿಸುವ ಕುರಿತು ನಿರ್ಣಯ ತೆಗೆದುಕೊಂಡು ಕಾರ್ಯ ನಿರ್ವಹಿಸಿದರೆ ಹಾಗೂ ಹಣ ಪಾವತಿಸುವಾಗಲೂ ಈ ಸಮಿತಿಯ ಒಪ್ಪಿಗೆ ಪಡೆದು ಹಣ ಪಾವತಿಸಿದರೆ ಸಂಸ್ಥೆಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಕಾಣಬಹುದು. ಈ ಕುರಿತು ಹಿಂದಿನ ವರ್ಷಗಳ ವರದಿಯಲ್ಲಿ ನಮೂದಿಸಲಾಗಿತ್ತು. ಆದರೆ ಕೆಲವು ಸಂಸ್ಥೆಗಳ ಮುಖ್ಯಸ್ಥರು ಈ ಬಗ್ಗೆ ಗಮನ ಹರಿಸಿದ ಹಾಗೆ ಕಂಡುಬರುವದಿಲ್ಲ ಹಾಗೂ ಇದನ್ನು ಕಾರ್ಯರೂಪಕ್ಕೆ ತಂದಿರುವದಿಲ್ಲ. ಶಾಲಾ/ಕಾಲೇಜಿನ ಲೆಕ್ಕಪತ್ರದಲ್ಲಿ ಲೆಕ್ಕಪತ್ರ ಸರಿಯಾಗಿ ನಿರ್ವಹಣೆಯಾಗಬೇಕಾದರೆ ಈ ನಿಯಮವನ್ನು ಪಾಲಿಸುವದು ಅವಶ್ಯ.
2. ಟ್ರಸ್ಟಿನ ಶಾಲಾ/ಕಾಲೇಜುಗಳ ಮುಖ್ಯಸ್ಥರು ಅನಿವಾರ್ಯ ಪ್ರಸಂಗದಲ್ಲಿ ಶಾಲಾ/ಕಾಲೇಜಿಗೆ ಸಂಬಂಧಪಟ್ಟ ಯಾವದಾದರೂ ಉದ್ದೇಶಕ್ಕಾಗಿ ಮುಂಗಡ ಹಣ ಪಡೆದಿದ್ದರೆ, ಅದರ ಲೆಕ್ಕವನ್ನು ಒಂದು ವಾರದ ಒಳಗೆ ಮುಕ್ತಾಯಗೊಳಿಸಬೇಕೆಂದು ಈ ಹಿಂದೆಯೇ ಅನೇಕ ಬಾರಿ ತಿಳಿಸಲಾಗಿದೆ. ಇದನ್ನು ಕಟ್ಟು ನಿಟ್ಟಾಗಿ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕು.
3. ಶಾಲಾ/ಕಾಲೇಜು ವತಿಯಿಂದ ಪಾವತಿಸಿದ ಹಣಕ್ಕೆ ರಸೀದಿ ಮತ್ತು ಬಿಲ್ಲು / ವಿವರಣೆ ಪತ್ರ ಸರಿಯಾಗಿ ಇಟ್ಟಿದ್ದು ಕೆಲವು ಸಂಸ್ಥೆಗಳಲ್ಲಿ ಕಂಡು ಬಂದಿರುವದಿಲ್ಲ. ಪ್ರತಿಯೊಂದು ಬಿಲ್ಲಿನ ಹಣವನ್ನು ನಿಯಮದ ಪ್ರಕಾರ ಪಾವತಿಸಿ ಸರಿಯಾದ ಓಚರನ್ನು ಇಡಬೇಕು ಪ್ರತಿಯೊಂದು ಬಿಲ್ಲು ಪಾವತಿಸಿದ ಕೂಡಲೆ ಅದರ ಮೇಲೆ Head of Account ಕಡ್ಡಾಯವಾಗಿ ನಮೂದಿಸಬೇಕು. ಇದನ್ನು ಸಂಸ್ಥೆಯ ಮುಖ್ಯಸ್ಥರು ಪರಿಶೀಲಿಸಿ ಲೆಕ್ಕಪತ್ರದ ನಿರ್ವಹಣೆ ಪುಸ್ತಕದ ಮೇಲೆ ಸಹಿ ಮಾಡಬೇಕು.
4. ಕೆನರಾ ವೆಲ್‌ಫೇರ್ ಟ್ರಸ್ಟಿಗೆ ನೀಡುವ ದೇಣಿಗೆಗೆ ಸೆಕ್ಷನ 80G ಪ್ರಕಾರ ಆದಾಯಕರ ವಿನಾಯ್ತಿಯನ್ನು, ಆದಾಯಕರ ಇಲಾಖೆಯವರು ದಿನಾಂಕ 03–06–2011 ರಂದು ಆದೇಶ ಹೊರಡಿಸಿ ಸೆಕ್ಷನ 80G ಪ್ರಕಾರ ದೇಣಿಗೆ ಹಣಕ್ಕೆ ನೀಡುವ ವಿನಾಯ್ತಿಯನ್ನು ಮುಂದುವರೆಸಿದ್ದಾರೆ. ಸಂಸ್ಥೆಯ ಮುಖ್ಯಸ್ಥರು ಇದನ್ನು ಗಮನಿಸಬೇಕು.

## 25. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ

ಸಾಮಾನ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಪಠ್ಯಪುಸ್ತಕದಲ್ಲಿರುವ ಪಾಠಗಳನ್ನು ಅಧ್ಯಾಪಕರು ಮುಗಿಸಿದರೆ ವರ್ಷದ ಕರ್ತವ್ಯ ಮುಗಿದಂತೆ ಹಾಗೂ ಪರೀಕ್ಷೆಯ ಪರಿಣಾಮವೇ ಶಿಕ್ಷಣ ಸಂಸ್ಥೆಯ ತರಗತಿಯ ಅಳತೆಗೋಲು ಎಂಬ ಕಲ್ಪನೆಯಿದೆ. ಪಠ್ಯಪುಸ್ತಕದ ಆಚೆಯೂ ಇರುವ ಹೊರಗಿನ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ರಾಜಕೀಯ ಚಿಂತನೆ (ಅಣಕು ಸಂಸತ್ತಿನ ಮೂಲಕ) ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳು ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವಂಥ ಬಹುಮುಖ ವ್ಯಕ್ತಿತ್ವ ವಿಕಸನ ಶಿಕ್ಷಣ ಪದ್ಧತಿಗೆ ಬೋಧಕ ಸಿಬ್ಬಂದಿಗಳು ವಿಶೇಷ ಗಮನ ನೀಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ಕ್ರುಗರ್ ಫೌಂಡೇಶನ್ ನೀಡಿದ ಹೆಚ್ಚುವರಿ ಆರ್ಥಿಕ ಸೌಲಭ್ಯ ಪಡೆಯುತ್ತಿರುವ ತಾತ್ಕಾಲಿಕ ಶಿಕ್ಷಕರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ಆದ್ಯತೆ ಮೇರೆಗೆ ವಿಶೇಷ ಗಮನ ನೀಡಲು ಸೂಚಿಸಿದೆ. ಆಯಾ ಶಾಲೆಯ ಮುಖ್ಯಸ್ಥರು ಈ ಕುರಿತು ಹೆಚ್ಚು ಗಮನ ಹರಿಸಿ ಕ್ರುಗರ ಫೌಂಡೇಶನ್ ನೀಡುತ್ತಿರುವ ಸಹಾಯ ಧನದ ಹಿಂದೆ ಇರುವ ಸಾಮಾಜಿಕ ಕಳಕಳಿ ಸಾರ್ಥಕಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು.

ಕೆನರಾ ವೆಲ್‌ಫೇರ್ ಟ್ರಸ್ಟು ಎಲ್ಲ ಸಂಸ್ಥೆಗಳ ಶೈಕ್ಷಣಿಕ ಪರಿಶೀಲನೆ ಹಾಗೂ ಲೆಕ್ಕಪತ್ರ ಪರಿಶೀಲನೆ ನಡೆಸುವಂತ ಈ ಒಂದು ಹೊಸ ಯೋಜನೆಯನ್ನು ಕಳೆದ ಕೆಲವು ವರ್ಷಗಳಿಂದ ನಡೆಸುತ್ತ ಬಂದಿದೆ. ಇದರಿಂದ ಶಾಲೆಯ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಅನುಕೂಲವಾಗುವದರ ಜೊತೆಗೆ ಶಾಲೆಯ ಆಡಳಿತ, ಲೆಕ್ಕಪತ್ರ ನಿರ್ವಹಣೆಗೆ ಹಾಗೂ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸ್ಥಳದಲ್ಲೆ ಪರಿಹಾರ ದೊರೆಯುವದರಿಂದ ಶಾಲೆಯ ಮುಖ್ಯಾಧ್ಯಾಪಕರಿಗೆ / ಪ್ರಾಚಾರ್ಯರಿಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲು ಹಾಗೂ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಸಹಕಾರಿಯಾಗುತ್ತದೆ ಎಂಬುದು ಪರಿಶೀಲನಾ ತಂಡದ ಅನಿಸಿಕೆ. ಸಂಸ್ಥೆಯ ಮುಖ್ಯಸ್ಥರು ವರದಿಯಲ್ಲಿ ನಮೂದಿಸಿದ ನ್ಯೂನತೆಗಳಿಗೆ ಹೆಚ್ಚು ಒತ್ತು ನೀಡಿ ಕಾರ್ಯ ನಿರ್ವಹಿಸಿದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಗತಿ ತೋರಿಸಲು ಸಾಧ್ಯವಿದೆ.

ಶ್ರೀಯುತ ವಿ.ಎಸ್.ಸಕ್ಸೇನಾ ಅವರು ಬರೆದ View of Life – *The Sanatana Way* ಪುಸ್ತಕವನ್ನು ಟ್ರಸ್ಟು ಖರೀದಿಸಿದೆ. ವಿಚಾರಪೂರಿತವಾದ ಈ ಪುಸ್ತಕದ ಪ್ರತಿಯನ್ನು ಟ್ರಸ್ಟಿನ ಎಲ್ಲ ಶಾಲಾ–ಕಾಲೇಜುಗಳ ಗ್ರಂಥಾಲಯದಲ್ಲಿ ಇಡುವಂತೆ ಈ ಪುಸ್ತಕದ ಪ್ರತಿಯನ್ನು ಶಾಲಾ–ಕಾಲೇಜುಗಳ ಮುಖ್ಯಸ್ಥರಿಗೆ ನೀಡಲಾಗುವದು.

❖ ಮಾನ್ಯ ಟ್ರಸ್ಟಿಗಳಾದ **ಪ್ರೊ. ಜಿ.ವಿ.ಭಟ್ಟ**ರವರು ಟ್ರಸ್ಟು ನಡೆಸುತ್ತಿರುವ ಶಾಲಾ ಕಾಲೇಜುಗಳಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡದ ಜೊತೆಗೆ ಭಾಗವಹಿಸಿ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಪಾಲುಗೊಂಡು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ, ಅವರಿಗೆ ಧನ್ಯಾವಾದಗಳು.

❖ 2012–2013ನೇ ಸಾಲಿನ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಎಲ್ಲ ವಿಷಯ ತಜ್ಞರು ಸಂಪೂರ್ಣ ಸಹಕಾರ ನೀಡಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಪ್ರತಿಯೊಂದು ಶಾಲೆಯ ಶೈಕ್ಷಣಿಕ ಕಾರ್ಯವನ್ನು ವೀಕ್ಷಿಸಿ ಕೊನೆಯಲ್ಲಿ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಅಧ್ಯಾಪಕರಲ್ಲಿ ಹಾಗೂ ಪರಿಶೀಲನಾ ತಂಡದಲ್ಲಿ ವ್ಯಕ್ತಪಡಿಸಿ, ಮುಂಬರುವ ದಿನಗಳಲ್ಲಿ ಶಾಲೆಗಳ ಪ್ರಗತಿಗಾಗಿ ಹಾಕಿಕೊಳ್ಳಬೇಕಾದ ಕಾರ್ಯಯೋಜನೆ ಕುರಿತು ತಿಳುವಳಿಕೆ ನೀಡಿರುತ್ತಾರೆ. ಈ ಒಂದು ಮಹತ್ವದ ಕಾರ್ಯದಲ್ಲಿ ಪಾಲುಗೊಂಡು ತಮ್ಮ ಅಮೂಲ್ಯವಾದ ವೇಳೆಯನ್ನು ಈ ಕಾರ್ಯಕ್ಕೆ ನೀಡಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಬರುವ ವರ್ಷಗಳಲ್ಲಿ ಕೂಡ ಅವರಿಂದ ಇದೇ ರೀತಿಯ ಸಹಕಾರ ನಿರೀಕ್ಷಿಸಲಾಗಿದೆ.

ಪ್ರಗತಿ ಪರಿಶೀಲನೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಶಾಲೆಗಳ/ ಕಾಲೇಜುಗಳ ಮುಖ್ಯಾಧ್ಯಾಪಕರು / ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದದವರು, ಅಧ್ಯಾಪಕೇತರರು ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪರಿಶೀಲನಾ ಕಾರ್ಯ ನೆರವೇರಿಸಲು ಪ್ರೇರಣೆ ನೀಡಿದ ಟ್ರಸ್ಟಿನ ಅಧ್ಯಕ್ಷರು ಮತ್ತು ಎಲ್ಲ ಧರ್ಮದರ್ಶಿಗಳಿಗೆ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

ಪ್ರಗತಿ ಪರಿಶೀಲನಾ ಹಾಗೂ ಲೆಕ್ಕ ಪತ್ರ ತಪಾಸಣಾ ವರದಿಯನ್ನು ಸಂಸ್ಥೆಯ ಎಲ್ಲ ಮುಖ್ಯಸ್ಥರಿಗೆ ನೀಡಲಾಗಿದೆ. ಈ ಹಿಂದಿನ ಪರಿಶೀಲನಾ ಸಮಿತಿಯ ವರದಿಯಲ್ಲಿ ಸೂಚಿಸಿದ ಸಲಹೆಗಳನ್ನು ಕೆಲವು ಸಂಸ್ಥೆಯ ಮುಖ್ಯಸ್ಥರು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬರುವದಿಲ್ಲ. ಆದ್ದರಿಂದ ಸಂಸ್ಥೆಯ ಎಲ್ಲ ಮುಖ್ಯಸ್ಥರು ಪರಿಶೀಲನಾ ವರದಿಯಲ್ಲಿ ನಮೂದಿಸಿದ ಎಲ್ಲ ಅಂಶಗಳಿಗೆ ಗಮನ ನೀಡಿ ಮುಂಬರುವ ದಿನಗಳಲ್ಲಿ ಎಲ್ಲ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೆಚ್ಚಿನ ಪ್ರಗತಿ ಸಾಧಿಸಲು ಈ ಮೂಲಕ ವಿನಂತಿಸಲಾಗಿದೆ.

2012–2013ನೇ ಶೈಕ್ಷಣಿಕ ವರ್ಷದ ಎಲ್ಲ ಶಾಲೆ, ಕಾಲೇಜುಗಳ ಹಾಗೂ ಕೆನರಾ ವೆಲ್‌ಫೆರ್ ಟ್ರಸ್ಟಿನ ಲೆಕ್ಕಪತ್ರವನ್ನು ಲೆಕ್ಕಪರಿಶೋಧಕರಾದ ಶ್ರೀ ಯು.ಕೆ.ಅಣ್ವೇಕರ ಹಾಗೂ ಅವರ ಸಿಬ್ಬಂದಿ ವರ್ಗ ಸಕಾಲದಲ್ಲಿ ಮುಗಿಸಿ ಕೊಟ್ಟಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಟ್ರಸ್ಟಿನ ದೈನಂದಿನ ವ್ಯವಹಾರದಲ್ಲಿ, ಅಭಿವೃದ್ಧಿ ಕೆಲಸದಲ್ಲಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ, ಟ್ರಸ್ಟಿನ ಆಡಳಿತ ನಿರ್ವಹಣೆಯಲ್ಲಿ ಸದಾ ಮಾರ್ಗದರ್ಶನ ನೀಡುತ್ತಿರುವ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ **ಶ್ರೀ ಎಸ್.ಪಿ.ಕಾಮತ**ರವರಿಗೆ, ಟ್ರಸ್ಟಿಗಳಾದ **ಪ್ರೊ. ಜಿ.ವಿ.ಭಟ್ಟ**ರವರಿಗೆ ಹಾಗೂ **ಶ್ರೀಮತಿ ಉಷಾ ಪ್ರಧಾನ** ಅವರಿಗೆ ಈ ಸಂದರ್ಭದಲ್ಲಿ ನೆನದು ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಾವೆಲ್ಲರೂ ಮುಕ್ತ ಮನಸ್ಸಿನಿಂದ ಮುಂದೆ ನಡೆಯುವ ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆ ಸೂಚನೆ ನೀಡಿ ಸಭೆಯಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಟ್ರಸ್ಟಿನ ಅಧ್ಯಕ್ಷರಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇನೆ. ಈ ಒಂದು ಮಹತ್ವಪೂರ್ಣವಾದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ತಮಗೆಲ್ಲರಿಗೆ ಇನ್ನೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ವರದಿಯನ್ನು ಮುಗಿಸುತ್ತೇನೆ.


**ಜೈ ಹಿಂದ!**

**ಅಂಕೋಲಾ**
**27 ಜುಲೈ 2013**

**ಕೃಷ್ಣಾನಂದ ವಿ.ಶೆಟ್ಟಿ**
**ಆಡಳಿತಾಧಿಕಾರಿ**
**ಕೆನರಾ ವೆಲ್‌ಫೇರ್ ಟ್ರಸ್ಟ್, ಅಂಕೋಲಾ**

# INSTITUTIONS RUN BY KANARA WELFARE TRUST

| Sl.No. | Name of the Institution | Place | Estd. | Head of the Institution |
|---|---|---|---|---|
| | **DEGREE COLLEGES** | | | |
| 1 | Gokhale Centenary College | Ankola | 1966 | Shri V.R.Kamat |
| 2 | Divekar College Of Commerce | Karwar | 1970 | Dr. M.H.Naik |
| 3 | KWT's College of Education | Dandeli | 2005 | Smt. Jayashree V.Korati |
| 4 | KWT's B.C.A. College | Karwar | 2008 | Dr. M.H.Naik |
| | **JUNIOR COLLEGES** | | | |
| 5 | Gokhale Centenary Pre-University College | Ankola | 2001 | Shri V.R.Kamat |
| 6 | Divekar Pre-University Commerce College | Karwar | 2001 | Dr. M.H.Naik |
| 7 | Janata Vidyalaya Composite Junior College | Dandeli | 1971 | Shri M.S.Lamani |
| 8 | Janata Vidyalaya Composite Junior College | Kadtoka, Honnavar | 1971 | Shri Bhimraj R. |
| 9 | Janata Vidyalaya Composite Junior College | Shirali, Bhatkal | 1982 | Shri A.B.Ramrath |
| 10 | P.M. Composite Junior College | Ankola | 1993 | Shri Phalgun C.Gouda |
| 11 | Divekar Pre-University Science College | Karwar | 2004 | Dr. M.H.Naik |
| | **HIGH SCHOOLS** | | | |
| 12 | People's Multipurpose High School | Ankola | 1953 | Shri R.V.Keni |
| 13 | Janata Vidyalaya | Baad-Kagal, Kumta | 1954 | Shri S.N.Nayak |
| 14 | Janata Vidyalaya | Shirali, Bhatkal | 1955 | Smt. Savitri Naik |
| 15 | Janata Vidyalaya | Dandeli | 1956 | Smt. Saraswati Naik |
| 16 | Janata Vidyalaya | Kadwad, Karwar | 1960 | Shri F.B.Talwar |
| 17 | Janata Vidyalaya | Kasarkod, Honnavar | 1960 | Shri L.V.Bhat |
| 18 | Janata Vidyalaya | Murdeshwar, Bhatkal | 1960 | Shri Sandesh Ullikashi |
| 19 | Janata Vidyalaya | Mirjan-Kodkani, Kumta | 1961 | Smt. Usha N.Nayak |
| 20 | Janata Vidyalaya | Kadtoka, Honnavar | 1962 | Smt. Usha G.Bhat |
| 21 | Janata Vidyalaya | Mudga, Karwar | 1963 | Shri S.G.Sheregar |
| 22 | Janata Vidyalaya | Dhareshwar, Kumta | 1964 | Smt. Laxmi Kasmadi |
| 23 | Janata Vidyalaya | Bedkani, Siddapur | 1965 | Shri A.R.Kondli |
| 24 | Smt. Kamalabai Pikale High School | Katgal, Kumta | 1966 | Shri I.V.Hebbar |
| 25 | Janata Vidyalaya | Anilgod, Honnavar | 1966 | Shri K.G.Hulswar |
| 26 | Janata Vidyalaya | Kulve-Baroor, Sirsi | 1968 | Shri T.D.Lamani |
| 27 | People's Multipurpose High School (English Medium) | Ankola | 2011 | Shri R.V.Keni |
| | **PRIMARY AND PRE-PRIMARY SCHOOLS** | | | |
| 28 | English Medium Primary School | Dandeli | 1958 | Smt. Anusuya C.Revankar |
| 29 | Kannada Medium Primary School | Dandeli | 1999 | Smt. Anusuya C.Revankar |
| 30 | Dr. Dinkar Desai Primary School | Ankola | 2004 | Shri Subhash K Naik |
| 31 | Janata Vidyalaya Dinkar Primary School | Dhareshwar, Kumta | 2006 | Shri J.R.Gunaga |
| 32 | Shrimat Sadyojat Shankarashram Swamiji Balamandir | Shirali, Bhatkal | 2008 | Shri A.B.Ramrath |
| 33 | English Medium Nursery School | Dandeli | 1958 | Smt. Anusuya C.Revankar |
| 34 | Kannada Medium Nursery School | Dandeli | 1999 | Smt. Anusuya C.Revankar |
| 35 | Thakkar Bapa Nursery School | Ankola | 2003 | Smt. Poornima S.Achari |
| 36 | Janata Vidyalaya Dinkar Pre-Primary School | Dhareshwar, Kumta | 2005 | Shri J.R.Gunaga |
| 37 | Bala Vikasa Kendra | Mundgod | 1969 | Smt. Sujata N.Harihar |
| | **OTHER SOCIAL SERVICE INSTITUTIONS** | | | |
| 38 | Thakkar Bapa Tailoring School | Ankola | 1956 | Shri R.V.Keni |
| 39 | Anandashram Tailoring School | Mundgod | 1969 | Smt. Sujata N.Harihar |
| 40 | Dinkar Kalaniketan Music School | Ankola | 1990 | Shri V.G.Patil |
| 41 | Dinkar Kalaniketan Music School | Karwar | 1990 | Shri V.G.Patil |
| 42 | Satyasai Balawadi & Balavikas Kendra | Kodibag, Karwar | 1985 | Dr. M.H.Naik |
| 43 | Computer Training Centre | Karwar | 1998 | Dr. M.H.Naik |
| 44 | Computer Training Centre | Dandeli | 1998 | Shri M.S.Lamani |


UTTARA KANNADA DISTRICT
LOCATIONS HAVING INSTITUTION/S
UNDER KANARA WELFARE TRUST, ANKOLA
INDIA
Karnataka
Uttara Kannada
KARNATAKA
0 15 30
kilometres
BELGAUM DISTRICT
DHARWAD DISTRICT
HAVERI DISTRICT
SHIMOGA DISTRICT
UDUPI DISTRICT
GOA STATE
ARABIAN SEA
HALIYAL
Dandeli
JOIDA (SUPA)
YELLAPUR
MUNDGOD
Mundgod
KARWAR
Kodibag
Kadwad
Karwar
ANKOLA
Ankola
SIRSI
KUMTA
Baad Kagal
Mirjan
SIDDAPUR
Bedkani
Dhareshwar
HONNAVAR
Kasarkod
Murudeshwar
BHATKAL
Shirali